# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಡಿಸೆಂಬರ್ 21, 2021

ಸಂಪುಟ : 48 ಸಂಚಿಕೆ : 220 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




**ಬಕ್ಕೇಶ್ವರ ಸ್ವಾಮಿ ಕಾರ್ತಿಕ ...**

ದಾವಣಗೆರೆ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಸಂಜೆ ವಿಜೃಂಭಣೆಯಿಂದ ಕಾರ್ತಿಕೋತ್ಸವ ಜರುಗಿತು. ಇದೇ ವೇಳೆ ಸಿಡಿಮದ್ದಿನ ಕಾರ್ಯಕ್ರಮವು ಸಾರ್ವಜನಿಕರ ಗಮನ ಸೆಳೆಯಿತು.

# ಮತಾಂತರ ನಿಷೇಧ ಕಾಯ್ದೆ ಜಾರಿಗೆ ಸಚಿವ ಸಂಪುಟದ ತೀರ್ಮಾನ

ಬೆಂಗಳೂರು, ಡಿ. 20 - ಮತಾಂತರ ನಿಷೇಧ ಕಾನೂನು ಜಾರಿಗೊಳಿಸಲು ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ.

ಮತಾಂತರ ನಿಷೇಧಕ್ಕೆ ಪ್ರತಿಪಕ್ಷಗಳು ಹಾಗೂ ಕ್ರಿಶ್ಚಿಯನ್ ಸಮುದಾಯ ತೀವ್ರ ವಿರೋಧ ವ್ಯಕ್ತಪಡಿಸಿದರೂ, ಅದನ್ನು ಗಣನೀಯಗೆ ತೆಗೆದುಕೊಳ್ಳದೇ ಉತ್ತರ ಪ್ರದೇಶ ಸೇರಿದಂತೆ ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ತಂದಿರುವ ಕಾನೂನನ್ನು ಕರ್ನಾಟಕದಲ್ಲೂ ಜಾರಿಗೊಳಿಸಲು ಮುಂದಾಗಿದೆ.

ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆದ ಸಂಪುಟ ಸಭೆಯಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ವಿಧಾನ ಮಂಡಲದಲ್ಲಿ ಮಂಡನೆ ಮಾಡಿ, ಕಾನೂನು ತರಲು ಸಭೆ ಸಮ್ಮತಿಸಿದೆ.

ಬೆಂಗಳೂರಿನಲ್ಲಿ ನಡೆದ ವಿಧಾನಮಂಡಲದ ಅಧಿವೇಶನ ಸಂದರ್ಭದಲ್ಲೇ ಮತಾಂತರ ನಿಷೇಧ ಕಾಯ್ದೆಯನ್ನು ಮಂಡಿಸಿ, ಕಾನೂನು ತರಲು ಸರ್ಕಾರ ಸಿದ್ಧತೆ ನಡೆಸಿತ್ತು. ಆದರೆ ಕಾಯ್ದೆ ಪೂರ್ಣ ಪ್ರಮಾಣದಲ್ಲಿ ಸಿದ್ಧಪಡಿಸದ ಕಾರಣ ಇದೀಗ ಬೆಳಗಾವಿ ಅಧಿವೇಶನದಲ್ಲಿ ಮಂಡನೆ ಮಾಡಿ ಅನುಮೋದನೆ ಪಡೆಯಲು ನಿರ್ಧರಿಸಿದೆ.

ಹಿಂದುಗಳನ್ನು ರಾಜ್ಯಾದ್ಯಂತ ಕ್ರಿಶ್ಚಿಯನ್ ಸಮುದಾಯಕ್ಕೆ ಬಲವಂತವಾಗಿ ಮತಾಂತರ ಮಾಡಲಾಗುತ್ತಿದೆ ಎಂದು ವಿಧಾನ ಸಭೆ ಒಳಗೆ ಮತ್ತು ಹೊರಗೆ ವ್ಯಾಪಕವಾಗಿ ಚರ್ಚೆಗೊಂಡಿತ್ತು. ಅಷ್ಟೇ ಅಲ್ಲ ಹಿಂದುಪರ ಸಂಘಟನೆಗಳು ಕಾಯ್ದೆಯನ್ನು ಅನುಷ್ಠಾನಗೊಳಿಸಬೇಕು ಎಂದು ಸರ್ಕಾರದ ಮೇಲೆ ಒತ್ತಡ ತಂದಿದ್ದವು.

ಕಾರಣಾಂತರಗಳಿಂದ ಬಲಹೀನಗೊಂಡವರನ್ನು ಮನವೊಲಿಸಿ, ಕ್ರಿಶ್ಚಿಯನ್ ಕೆಲವು ಪಾದ್ರಿಗಳು ಮತ್ತು ಮುಖಂಡರುಗಳು, ಹಿಂದುಗಳನ್ನು ತಮ್ಮ ಸಮಾಜಕ್ಕೆ ಮತಾಂತರ ಮಾಡಿಸುತ್ತಿದ್ದಾರೆ.

ಊಡುಗೊರೆ ನೀಡುವ ಮೂಲಕವೂ, ಶಿಕ್ಷಣ ಕೊಡಿಸುವ ನೆಪದಲ್ಲೂ, ವೈದ್ಯಕೀಯ ವೆಚ್ಚ ಭರಿಸುವುದರಲ್ಲೂ, ಇಲ್ಲವೆ ಭಲವಂತವಾಗಿ ಕ್ರಿಶ್ಚಿಯನ್ ಸಮುದಾಯದವರು ಹಿಂದುಗಳನ್ನು ಮತಾಂತರ ಮಾಡಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದವು.

ಈ ಬಗ್ಗೆ ಹೊಸ ದುರ್ಗದ ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ತನ್ನ ತಾಯಿಯನ್ನೇ ಕ್ರಿಶ್ಚಿಯನ್ ಸಮುದಾಯಕ್ಕೆ ನನ್ನ ಕ್ಷೇತ್ರ ಚರ್ಚ್‌ನ ಪಾದ್ರಿಗಳು ಮತಾಂತರ ಮಾಡಿಸಿದ್ದಾರೆ. ನನ್ನ ಜಿಲ್ಲೆಯಲ್ಲಿ ವ್ಯಾಪಕವಾಗಿ ಈ ಮತಾಂತರ (2ನೇ ಪುಟಕ್ಕೆ)

**ಕಾಯ್ದೆಯಲ್ಲಿ ಕೆಲವು ತಿದ್ದುಪಡಿ ಮಾಡಿ, ಇಂದೇ ವಿಧಾನಸಭೆಯಲ್ಲಿ ಮಂಡನೆ ಮಾಡಲು ನಿರ್ಧಾರ**

**ಬಲವಂತವಾಗಿ ಮತಾಂತರ ಮಾಡಿಸಿದವರಿಗೆ ಜೈಲು ಶಿಕ್ಷೆ ಸೇರಿ ಕೆಲ ಕಠಿಣ ಕ್ರಮ ಕೈಗೊಳ್ಳಲು ಕಾಯ್ದೆಯಲ್ಲಿ ಅವಕಾಶ**

## ಎಂಇಎಸ್ ನಿಷೇಧಕ್ಕೆ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು, ಡಿ. 20 - ಮಹಾರಾಷ್ಟ್ರ ಏಕೀಕರಣ ಸಮಿತಿಯ ಪುಂಡಾಟಿಕೆಯನ್ನು ಕನ್ನಡಿಗರು ಇನ್ನು ಸಹಿಸಲು ಸಾಧ್ಯವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕನ್ನಡಿಗರ ಉದಾರತೆಯನ್ನು ಪದೇ ಪದೇ ದುರುಪಯೋಗಪಡಿಸಿಕೊಳ್ಳುವ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಷೇಧಿಸುವ ಕುರಿತು ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ವಿರೂಪಗೊಳಿಸಿದ ಘಟನೆ ಸಂಬಂಧ ಖಂಡನಾ ನಿರ್ಣಯ ಅಂಗೀಕರಿಸುವಂತೆ ಆಗ್ರಹಿಸಿದ್ದಾರೆ.

ಸಂಗೊಳ್ಳಿ ರಾಯಣ್ಣ, ಶಿವಾಜಿ ಮಹಾರಾಜರ ಪ್ರತಿಮೆ ವಿರೂಪಗೊಳಿಸಿದ ಹಾಗೂ ಮಹಾರಾಷ್ಟ್ರದಲ್ಲಿ ಕನ್ನಡ ಧ್ವಜ ಸುಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಇಂದು ವಿಧಾನಭೆಯಲ್ಲಿ ಸರ್ಕಾರದ ಗಮನ ಸೆಳೆದು (2ನೇ ಪುಟಕ್ಕೆ)


## ಬೆಳಗಾವಿ : ಬಸವೇಶ್ವರರ ಚಿತ್ರಕ್ಕೆ ಅಗೌರವ

ಬೆಳಗಾವಿ, ಡಿ. 20 - ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿದ್ದಕ್ಕೆ ರಾಜ್ಯದಾದ್ಯಂತ ಆಕ್ರೋಶ ಭುಗಿಲೆದ್ದಿರುವ ಸಂದರ್ಭದಲ್ಲೇ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರ ಚಿತ್ರಕ್ಕೆ ಸಗಣಿ ಮೆತ್ತಿ ಅವಮಾನಿಸಲಾಗಿದೆ. ಹಲಸಿ ಗ್ರಾಮದಲ್ಲಿ ಸೋಮವಾರ ಬಸವೇಶ್ವರ ವೃತ್ತಕ್ಕೆ ಹಾಕಿರುವ ಚಿತ್ರಕ್ಕೆ ಸಗಣಿ ಬಳಿಯಲಾಗಿದೆ. ಅದೇ ವೃತ್ತದಲ್ಲಿ ಅಳವಡಿಸಿದ್ದ ಕನ್ನಡ ನಾಮಫಲಕಕ್ಕೆ ಮಸಿ ಬಳಿಯಲಾಗಿದೆ. ಅಲ್ಲಿನ ಗ್ರಾಮ ಪಂಚಾಯ್ತಿ ಆವರಣದಲ್ಲಿದ್ದ ಕನ್ನಡ ಬಾವುಟವನ್ನೂ ಕಿತ್ತು ಹಾಕಲಾಗಿದೆ.

## ರಾಜ್ಯಗಳು ಬಯಸಿದಲ್ಲಿ ಶಾಲೆಗಳಲ್ಲಿ ಭಗವದ್ ಗೀತೆ ಕಲಿಸಬಹುದು : ಕೇಂದ್ರ

ನವದೆಹಲಿ, ಡಿ. 20 – ರಾಜ್ಯ ಸರ್ಕಾರಗಳು ಬಯಸಿದಲ್ಲಿ ಶಾಲೆಗಳಲ್ಲಿ ಭಗವದ್ ಗೀತೆ ಕಲಿಸಲು ಅವಕಾಶ ನೀಡಬಹುದು ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ. ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಶಿಕ್ಷಣ ಸಚಿವೆ ಅನ್ನಪೂರ್ಣ ದೇವಿ, ಶಿಕ್ಷಣ ಸಹವರ್ತಿ ಪಟ್ಟಿಯಲ್ಲಿದೆ. ರಾಜ್ಯ ಸರ್ಕಾರಗಳು ಬಯಸಿದಲ್ಲಿ ಪಠ್ಯದಲ್ಲಿ ಭಗವದ್ ಗೀತೆ ಸೇರಿಸಬಹುದು ಎಂದು ತಿಳಿಸಿದ್ದಾರೆ.

# ಬೊಮ್ಮಾಯಿಗೆ ವರಿಷ್ಠರ ಬುಲಾವ್



ಬೆಂಗಳೂರು, ಡಿ. 20 - ನಾಯಕತ್ವ ಬದಲಾವಣೆ ಕುರಿತಂತೆ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಬಿಜೆಪಿ ವರಿಷ್ಠರು ಬುಲಾವ್ ಮಾಡಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲದ ಅಧಿವೇಶನ ಮುಗಿಯುತ್ತಿದ್ದಂತೆ ಡಿಸೆಂಬರ್ 24 ಇಲ್ಲವೆ 25 ರಂದು ದೆಹಲಿಗೆ ಬರುವಂತೆ ಮುಖ್ಯಮಂತ್ರಿಯವರಿಗೆ ವರಿಷ್ಠರು ಸಂದೇಶ ರವಾನೆ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಬಿಟ್ ಕಾಯಿನ್ ಆರೋಪ ಕೇಳಿ ಬಂದ ಬೆನ್ನೆಲ್ಲೇ ನಾಯಕತ್ವ ಬದಲಾವಣೆ ಬಗ್ಗೆ ಕಳೆದ ಎರಡು ತಿಂಗಳಿನಿಂದಲೂ ಚರ್ಚೆ ನಡೆಯುತ್ತಿದೆ. ಅಷ್ಟೇ ಅಲ್ಲ ಮುಖ್ಯಮಂತ್ರಿಯವರು ಈ ಸಂಬಂಧ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಿ ಬಂದಿದ್ದಾರೆ.

ವರಿಷ್ಠರ ಸಂದೇಶ ಬಂದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ನಿನ್ನೆ ತಮ್ಮ ಸ್ವಂತ ಕ್ಷೇತ್ರ ಶಿಗ್ಗಾಂವ್‌ನಲ್ಲಿ ಅಧಿಕಾರದ ಬಗ್ಗೆ ಭಾವನಾತ್ಮಕವಾಗಿ ಮಾತನಾಡಿದ್ದಾರೆ.

ಇದೇ ವೇದಿಕೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ನಿರಾಣಿ ಮಾತನಾಡಿ, ಬೊಮ್ಮಾಯಿ ಅವರು ಕೇಂದ್ರ ಸಂಪುಟ ಸೇರಲಿದ್ದಾರೆ ಎಂದು ಬಾಂಬ್ ಸಿಡಿಸಿದರು. ಮುಖ್ಯಮಂತ್ರಿಯವರಿಗೆ ಕಾಲಿನ ಮಂಡಿ ನೋವು ತೀವ್ರ ತೊಂದರೆ ಕೊಡುತ್ತಿದೆ. ಅವರಿಗೆ ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲಾಗುತ್ತಿಲ್ಲ.

ತುರ್ತಾಗಿ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕು. ಚಿಕಿತ್ಸೆಗೆ ಒಳಗಾದರೆ ಮೂರ ರಿಂದ ನಾಲ್ಕು ತಿಂಗಳ ಕಾಲ ಪೂರ್ಣವಾಗಿ ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತದೆ. ತಮ್ಮ ಮಂಡಿ ನೋವಿನ ಚಿಕಿತ್ಸೆಯನ್ನು ಅಮೆರಿಕಾದಲ್ಲಿ ಪಡೆದುಕೊಳ್ಳಲು ಮುಖ್ಯಮಂತ್ರಿಯವರು ನಿರ್ಧರಿಸಿದ್ದಾರೆ.

ಬಹುತೇಕ ಜನವರಿ 2ನೇ ವಾರದಲ್ಲಿ ಅವರು ಚಿಕಿತ್ಸೆಗೆ ಒಳಗಾಗುವ ಸಾಧ್ಯತೆ ಇದೆ. ಸಧ್ಯ ಅವರು ತಮ್ಮ ಕಾಲು ನೋವನ್ನು ತಡೆದುಕೊಳ್ಳಲು ಭಾರಿ ಶ್ರಮ ಪಡುತ್ತಿದ್ದಾರೆ. ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರೂ, ಅವರನ್ನು ಬಾದಿಸುತ್ತಲೇ ಇದೆ.

ಯಾವುದೇ ಸಮಾರಂಭ ಇಲ್ಲವೆ ಕಚೇರಿ ಕೆಲಸ ಮಾಡುತ್ತಿದ್ದರೂ, ಸ್ವಲ್ಪ ವಿರಾಮ ದೊರೆತರೆ ನಿದ್ರೆಗೆ ಜಾರುತ್ತಿದ್ದಾರೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ನಿನ್ನೆ ಬೊಮ್ಮಾಯಿ ಅವರು ಅಧಿಕಾರ ಶಾಶ್ವತವಲ್ಲ ಎಂದು ಭಾನಾತ್ಮಕವಾಗಿ ನುಡಿದಿದ್ದಾರೆ ಎಂದು ಹೇಳಲಾಗುತ್ತಿದೆ.

ಅವರ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ಅವರ ಸಹೋದ್ಯೋಗಿಗಳಾದ ಆರ್. ಅಶೋಕ್, ಶ್ರೀನಿವಾಸ ಪೂಜಾರಿ ಸೇರಿದಂತೆ ಹಲವರು ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕನಸು.

ಮುಂದಿನ ವಿಧಾನಸಭಾ ಚುನಾವಣೆಯು ಅವರ ನಾಯಕತ್ವದಲ್ಲಿ ನಡೆಯಲಿದೆ ಎಂದು (2ನೇ ಪುಟಕ್ಕೆ)



**ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಸಂಭ್ರಮದ ಕಾರ್ತಿಕೋತ್ಸವ**

ದಾವಣಗೆರೆ ಗೀತಾಂಜಲಿ ಚಿತ್ರಮಂದಿರ ಪಕ್ಕದಲ್ಲಿರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಸೋಮವಾರ ಸಂಜೆ ಏರ್ಪಾಡಾಗಿದ್ದ ಕಡೇ ಕಾರ್ತಿಕೋತ್ಸವವನ್ನು ಅಪಾರ ಭಕ್ತರ ಸಮ್ಮುಖದಲ್ಲಿ ದೇವಸ್ಥಾನ ಸಮಿತಿ ಪದಾಧಿಕಾರಿಗಳನ್ನೊಳಗೊಂಡಂತೆ ಗಣ್ಯರು ಉದ್ಘಾಟಿಸಿದರು.

## ಮತದಾರರ ಚೀಟಿ - ಆಧಾರ್ ಲಿಂಕ್ ಮಸೂದೆಗೆ ಸಮ್ಮತಿ



ನವದೆಹಲಿ ಡಿ. 20 – ಆಧಾರ್ ಮಾಹಿತಿಯನ್ನು ಚುನಾವಣಾ ಗುರುತಿನ ಚೀಟಿಗೆ ಜೋಡಣೆ ಮಾಡುವ ಮಸೂದೆಗೆ ಲೋಕಸಭೆ ಗದ್ದಲದ ನಡುವೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಕಿರಮ್ ರಿಜಿಜು ಅವರು ಚುನಾವಣಾ ಕಾಯ್ದೆಗಳ (ತಿದ್ದುಪಡಿ) ಮಸೂದೆ, 2021 ಮಂಡಿಸಿದರು. ಸ್ವಲ್ಪಕಾಲದ ಚರ್ಚೆಯ ನಂತರ ಧ್ವನಿಮತದೊಂದಿಗೆ ಮಸೂದೆಯನ್ನು ಅಂಗೀಕರಿಸಲಾಯಿತು. ಮಸೂದೆಯನ್ನು ಸಂಸದೀಯ ಸಮಿತಿಯ ಪರಿಶೀಲ (2ನೇ ಪುಟಕ್ಕೆ)

# ಎಂಇಎಸ್-ಶಿವಸೇನೆ ಪುಂಡರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಡಿ.20- ಕನ್ನಡ ಬಾವುಟ ಸುಟ್ಟು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಪ್ರತಿಮೆ ಭಗ್ನಗೊಳಿಸಿರುವ ಎಂಇಎಸ್ ಪುಂಡರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕೈಗೊಳ್ಳಬೇಕೆಂದು ಆಗ್ರಹಿಸಿ ಕನ್ನಡಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ಜಮಾಯಿಸಿದ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಎಂಇಎಸ್ ಮತ್ತು ಶಿವಸೇನೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡಪರ ಸಂಘಟಣೆಗಳ ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಜಿ.ಶಿವಕುಮಾರ್, ಪದೇ ಪದೇ ಕರ್ನಾಟಕ ಮತ್ತು ಮಹಾರಾಷ್ಟ್ರದ ಮಧ್ಯೆ ಬೆಂಕಿ ಹೊತ್ತಿಸುವ ಕೆಲಸ ಮಾಡುತ್ತಿರುವ ಎಂಇಎಸ್ ಕಾರ್ಯಕರ್ತರ ನಡೆ ಖಂಡನೀಯ ಎಂದರು.

ಬೆಳಗಾವಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಪ್ರತಿ ಬಾರಿಯು ಎಂಇಎಸ್ ಪುಂಡರು ಪುಂಡಾಟಿಕೆ ಮೆರೆಯುತ್ತಿದ್ದು, ಈ ಬಾರಿ ಕನ್ನಡ ಬಾವುಟ ಸುಟ್ಟಿರುವುದಲ್ಲದೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಪ್ರತಿಮೆಯನ್ನು ವಿರೂಪಗೊಳಿಸಿದ್ದಾರೆ. ಎಂಇಎಸ್‌ನ ಈ ಕೆಟ್ಟ ನಡೆಯ ಹಿಂದೆ ಬೆಳಗಾವಿಯನ್ನು ಛಿದ್ರಗೊಳಿಸುವ ಹುನ್ನಾರ ಅಡಗಿದೆ ಎಂದು ಆಶರೋಪಿಸಿದರು.

ಒಕ್ಕೂಟದ ಜಮ್ಮನಹಳ್ಳಿ ನಾಗರಾಜ್ ಮಾತನಾಡಿ, ಎಂಇಎಸ್ ಮತ್ತು ಶಿವಸೇನೆ ಸಂಘಟನೆಗಳನ್ನು ಕರ್ನಾಟಕದಲ್ಲಿ ನಿಷೇಧಿಸಬೇಕು. ಕನ್ನಡ ಬಾವುಟ ಸುಟ್ಟ ಮತ್ತು ರಾಯಣ್ಣರ ಪ್ರತಿಮೆ ವಿರೂಪಗೊಳಿಸಿದ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಗೆ ಬೆಂಬಲ ಸೂಚಿಸಿ ಭಾಗವಹಿಸಿ ಮಾತನಾಡಿದ ರೈತ ಮುಖಂಡ ಬಲ್ಲೂರು ರವಿಕುಮಾರ್, ಕನ್ನಡ ಬಾವುಟ ಸುಟ್ಟಿರುವುದು ಮತ್ತು ರಾಯಣ್ಣರ ಪುತ್ಥಳಿ ಭಗ್ನಗೊಳಿಸಿರುವುದರಿಂದ ಇಡೀ ರಾಜ್ಯದ ಮಾನ ಹಾನಿಯಾದಂತಾಗಿದೆ ಎಂದರು.

ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕನ್ನಡಪರ ಸಂಘಟನೆಗಳ ಮುಖಂಡರು, ಬಳಿಕ ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ತೆರಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಮೂರ್ತಿಗೆ ಕ್ಷೀರಾಭಿಷೇಕ ನಡೆಸಿ, ಮಾಲಾರ್ಪಣೆ ಮಾಡಿ ರಾಯಣ್ಣರ ಪರವಾಗಿ (2ನೇ ಪುಟಕ್ಕೆ)

**ನಗರದಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದ ಪ್ರತಿಭಟನೆ**



ದಾವಣಗೆರೆ ಜಯದೇವ ವೃತ್ತದಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ



ಜಗಳೂರಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ ನಂತರ ಪುಂಡರ ಬಂಧನಕ್ಕೆ ಒತ್ತಾಯಿಸಿ ತಹಶೀಲ್ದಾರ್‌ಗೆ ಮನವಿ.

## ಜಗಳೂರಿನಲ್ಲಿ ಕರವೇ ಪ್ರತಿಭಟನೆ

ಜಗಳೂರು, ಡಿ.20- ನಾಡಧ್ವಜ ಸುಟ್ಟು ಹಾಕಿ, ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ವಿರೂಪಗೊಳಿಸಿರುವ ಎಂಇಎಸ್ ಪುಂಡರನ್ನು ಶೀಘ್ರವೇ ಬಂಧಿಸಿ ಗಡಿಪಾರು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಮಂಗಳವಾರ ಪ್ರತಿಭಟನೆ ನಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರತಿಭಟನೆ ರ‍್ಯಾಲಿ ಮೂಲಕ ತಹಶೀಲ್ದಾರ್ ಕಚೇರಿವರೆಗೆ ತೆರಳಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಕರವೇ ಅಧ್ಯಕ್ಷ ಮಹಾಂತೇಶ್ ಮಾತನಾಡಿ, ಕನ್ನಡ ಧ್ವಜ ಸುಟ್ಟು, ಬ್ರಿಟಿಷರ ವಿರುದ್ಧ ಹೋರಾಡಿದ ನಾಯಕ ಸಂಗೊಳ್ಳಿ ರಾಯಣ್ಣನ ಪ್ರತಿಮೆ ವಿರೂಪ ಗೊಳಿಸುವ ಮೂಲಕ ಎಂಇಎಸ್ ಕಾರ್ಯಕರ್ತರು ಕನ್ನಡಿಗರನ್ನು ಕೆಣಕಿದ್ದಾರೆ. ಇಂತಹ ವಿಕೃತಿ ಮೆರೆದಿರುವವರನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ವಕೀಲರಾದ ಆರ್.ಓಬಳೇಶ್ ಮಾತ ನಾಡಿ, ಕನ್ನಡಿಗರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಮಾಡಿ ಕನ್ನಡ ನಾಮಫಲಕದ ವಾಹನಗಳಿಗೆ ಹಾನಿ ಮಾಡಿ ಕಿಡಿಗೇಡಿತನದ ಕೃತ್ಯ ಎಸುಗುತ್ತಿದ್ದರೂ (2ನೇ ಪುಟಕ್ಕೆ)


**ದ್ವಿತೀಯ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಕೂಡ್ಲೆಮ್ಮ ಗುರುಸಿದ್ದಪ್ಪ ಸುಂಕದ್**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಶ್ರೀ ಎಸ್.ಜಿ. ಮಂಜುನಾಥ, ಶ್ರೀಮತಿ ಅನುರಾಧ, ಕು|| ಪಾವನಾ ಮತ್ತು ಸುಂಕದ್ ವಂಶಸ್ಥರು

**ಡಾ. ಈಶ್ವರಪ್ಪ ಎಂ. ಬಿಸನಳ್ಳಿ ನಿಧನ**



ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್, 5ನೇ ಮೇನ್ # 2187/1 (ಬೂದೇಶ್ವರ ಸ್ವಾಮಿ ದೇವಸ್ಥಾನ ಎದುರು) ವಾಸಿ ದಿ ಮಹಾದೇವಪ್ಪ ಬಿಸನಳ್ಳಿ ಇವರ ಪುತ್ರ

**ಡಾ. ಈಶ್ವರಪ್ಪ ಎಂ. ಬಿಸನಳ್ಳಿ**

ಇವರು ದಿನಾಂಕ 20.12.2021ರ ಸೋಮವಾರ ಸಂಜೆ 6.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.12.2021ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ಬೂದಿಹಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

ಮೊ: 99643 80814, 96636 66426

# ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ, ಸಣ್ಣ ಕೈಗಾರಿಕೆಗೆ ಒತ್ತು



**ಹರಿಹರ ಶಾಖೆಗೆ ಪರಿಶೀಲನೆ, ಸಿರಿಗೆರೆ ಶಾಖೆಗೆ ಸ್ವಂತ ಕಟ್ಟಡ**
**ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ.ಬಿ ಚಂದ್ರಶೇಖರ್**

ಮಲೇಬೆನ್ನೂರು, ಡಿ.20- ಕುಂಬಳೂರು ಬಳಿ ಇರುವ ಸಂಘದ ಜಮೀನಿನ ಭೂ ಪರಿವರ್ತನೆ ಪ್ರಕ್ರಿಯೆ ನಡೆಯುತ್ತಿದ್ದು, ಅದು ಆದ ನಂತರ ಅಲ್ಲಿ ಸಮುದಾಯ ಭವನ, ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಸೇರಿದಂತೆ ಸಣ್ಣ ಕೈಗಾರಿಕೆಗಳಿಗೆ ಅವಕಾಶ ನೀಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್ ಹೇಳಿದರು.

ಇಲ್ಲಿನ ವಾಸವಿ ಕಲ್ಯಾಣ ಮಂಟಪದಲ್ಲಿ ಇಂದು ಹಮ್ಮಿಕೊಂಡಿದ್ದ ಶಿವ ವಿವಿಧೋದ್ದೇಶ ಸಹಕಾರ ಸಂಘದ 2020-21 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹರಿಹರದಲ್ಲಿ ಸಂಘದ ಶಾಖೆ ಆರಂಭಿಸುವ ಬಗ್ಗೆ ಅವಸರದ ನಿರ್ಧಾರ ಇಲ್ಲ. ಇನ್ನೊಮ್ಮೆ ಪರಿಶೀಲನೆ ಮಾಡಿ ಎಲ್ಲರ ಸಲಹೆ ಪಡೆದು ತೀರ್ಮಾನ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದ ಡಾ. ಚಂದ್ರಶೇಖರ್ ಅವರು, ಹೊಳೆಸಿರಿಗೆರೆ ಯಲ್ಲಿ ಜಾಗ ಪಡೆದು ಶಾಖೆಗೆ ಕಟ್ಟಡ ನಿರ್ಮಿ ಸುವುದಕ್ಕೆ ಮೊದಲ ಆದ್ಯತೆ ನೀಡುತ್ತೇವೆ ಎಂದರು.

ನಮಗೆ ಸಂಘದ ಲಾಭಕ್ಕಿಂತ ಸದಸ್ಯರ ಹಿತ ಮುಖ್ಯ. ಸಂಘಕ್ಕೆ ಆಸ್ತಿ ಖರೀದಿ ಮಾಡಿದ್ದರಿಂದ ಲಾಭಾಂಶ ಕಡಿಮೆ ಬರುತ್ತದೆ. ಕೊರೊನಾ ಸಂಕಷ್ಟದ ನಡುವೆಯೂ ಸಂಘವು ಉತ್ತಮ ಪ್ರಗತಿ ಸಾಧಿಸಿರುವ ಬಗ್ಗೆ ತೃಪ್ತಿ ಇದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

3150 ಸದಸ್ಯರನ್ನು ಹೊಂದಿರುವ ಸಂಘವು 56,02,425 ರೂ ಪಾಲು ಧನ ಹೊಂದಿದ್ದು, 6,19,91,477 ರೂ ಠೇವಣಿ ಸಂಗ್ರಹಿಸಿದೆ. ಸದಸ್ಯರಿಗೆ ಹಾಗೂ ಗ್ರಾಹಕರಿಗೆ 6,18,95,290 ರೂ ಸಾಲ ಸೌಲಭ್ಯ ಕಲ್ಪಿಸಿದ್ದು, 2,03,94,927 ರೂ ನಿಧಿಗಳನ್ನು ಇಟ್ಟಿರುವ ಸಂಘವು ಈ ವರ್ಷ 25,24,418 ರೂ. ನಿವ್ವಳ ಲಾಭ ಗಳಿಸಿದೆ ಎಂದು ಡಾ. ಚಂದ್ರಶೇಖರ್ ವಿವರಿಸಿದರು.

ಸಂಘದ ಸಿವಿಲ್ ಇಂಜಿನಿಯರ್ ಆಗಿ ಬೆಣ್ಣೆಹಳ್ಳಿ ಶಿವಶಂಕರ್ ಅವರನ್ನು ನೇಮಕ ಮಾಡಿಕೊಳ್ಳುವ ವಿಷಯವನ್ನು ಡಾ. ಬಿ. ಚಂದ್ರಶೇಖರ್ ಪ್ರಸ್ತಾಪಿಸಿದಾಗ ಸಭೆ ಸಮ್ಮತಿತು.

ಸಂಘದ ನಿರ್ದೇಶಕ ಬೆಳ್ಳೂಡಿಯ ಜಿ. ಎಸ್. ರವಿಶಂಕರ್ ಅವರು ಹರಿಹರದಲ್ಲಿ ಶಾಖೆ ಮಾಡುವ ವಿಷಯ ಪ್ರಸ್ತಾಪಿಸಿದಾಗ ಸಭೆಯಲ್ಲಿ ಬೆಂಬಲ ವ್ಯಕ್ತವಾಯಿತಾದರೂ ನಂತರ ಮಾತನಾಡಿದ ಕೆಲವರು ಹರಿಹರದಲ್ಲಿ ಈಗಾಗಲೇ ಬಹಳ ಬ್ಯಾಂಕ್, ಸಹಕಾರ ಸಂಘಗಳಿವೆ. ಗ್ರಾಮೀಣ ಪ್ರದೇಶದಲ್ಲೇ ಶಾಖೆ ತೆರೆಯಿರಿ ಎಂಬ ಸಲಹೆ ಕೊಟ್ಟರು.

ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ್ರು, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ನಂದಿ ಸೌಹಾರ್ದ ಸಹಕಾರಿ ನಿರ್ದೇಶಕ ಜಿಗಳಿ ಇಂದೂಧರ್, ಯಲವಟ್ಟಿಯ ಡಿ. ಯೋಮಕೇಶ್ವರಪ್ಪ, ನಿಟ್ಟೂರಿನ ಎನ್.ಜಿ. ಶಿವಾಜಿ ಪಾಟೀಲ್, ಬಿ.ಜಿ. ಧನಂಜಯ, ಎಕ್ಕೆಗೊಂದಿ ರುದ್ರಗೌಡ, ಪುರಸಭೆ ಮಾಜಿ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಕುಂಬಳೂರು ತೀರ್ಥಪ್ಪ, ಪಾನಿಪೂರಿ ಸಿದ್ದೇಶ್, ಕುಂಬಳೂರಿನ ಹನುಮೇಶ್ ಮಾತನಾಡಿದರು.

ಸನ್ಮಾನಿತರಾಗಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಜಿ. ರುದ್ರಪ್ಪ ಮಾತನಾಡಿ, ಅತಿ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ಸಹಕಾರಿ ಸಂಘಗಳ ಪಟ್ಟಿಯಲ್ಲಿ ಈ ಸಂಘವು ಮೊದಲ ಸ್ಥಾನದಲ್ಲಿದೆ. ಕೊರೊನಾ ವೇಳೆ ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ನೀಡಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಸಂಘದ ಹಿರಿಯ ನಿರ್ದೇಶಕರಾದ ಬಣಕಾರ ವಿರೂಪಾಕ್ಷಪ್ಪ, ಕೊಕ್ಕನೂರು ದ್ಯಾಮಣ್ಣ, ಮಹಿಳಾ ನಿರ್ದೇಶಕಿ ಶ್ರೀಮತಿ ಸರೋಜಮ್ಮಭರಮಗೌಡ ಮಾತನಾಡಿದರು. ಸರೋಜಮ್ಮ, ಮಂಗಳಾ ಪ್ರಾರ್ಥಿಸಿದರು. ಸಂಘದ ನಿರ್ದೇಶಕ ಹಾಗೂ ವಕೀಲ ಹೆಚ್. ಬಿ. ಶಿವಕುಮಾರ್ ಸ್ವಾಗತಿಸಿದರು.

ಸಂಘದ ಪ್ರಭಾರಿ ಕಾರ್ಯದರ್ಶಿ ಜಿ. ಎಂ. ನಳಿನ ಸಭೆಯ ವಿಷಯಸೂಚಿ ಓದಿದರು. ಪ್ರಥಮ ದರ್ಜೆ ಸಹಾಯಕ ಹೆಚ್. ಹನುಮಂತಪ್ಪ ಹಿಂದಿನ ವಾರ್ಷಿಕ ಸಭೆಯ ನಡಾವಳಿಗಳನ್ನು ಓದಿದರು. ಸಂಘದ ಉಪಾಧ್ಯಕ್ಷ ಯಲವಟ್ಟಿಯ ಜಿ. ಆಂಜನೇಯ ಅವರು ವಾರ್ಷಿಕ ವರದಿ ಓದಿದರೆ, ನಿರ್ದೇಶಕ ಹೆಚ್.ಬಿ. ಶಿವಕುಮಾರ್ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸಿದರು. ಬಿ.ಹೆಚ್. ವಿಜಯ್ ಅವರು ಲೆಕ್ಕ ಪರಿಶೋಧನಾ ವರದಿ ಓದಿದರೆ, ಜಿ. ಎಂ. ನಳಿನ ಅವರು ಹೆಚ್ಚುವರಿ ಖರ್ಚುಗಳಿಗೆ ಮಂಜೂರಾತಿ ಪಡೆದುಕೊಂಡರು.

ಕೆ.ಜಿ. ಅಕ್ಷತ ಅವರು ಅಂದಾಜು ಪತ್ರಿಕೆ ಓದಿದರು. ಸಂಘದ ನಿರ್ದೇಶಕ ಹೆಚ್.ಜಿ. ಚಂದ್ರಶೇಖರ್ ನಿವ್ವಳ ಲಾಭ ವಿಭಾಗಣೆಗೆ ಸಭೆಯ ಒಪ್ಪಿಗೆ ಕೇಳಿದರು. ಇನ್ನೋರ್ವ ನಿರ್ದೇಶಕ ಕೆ.ಜಿ. ರಂಗನಾಥ್ ಅವರು ಲೆಕ್ಕ ಪರಿಶೋಧಕ ರಾಜೇಂದ್ರ ಬಾಬು ಅವರ ನೇಮಕ ಹಾಗೂ ಸಂಭಾವನೆ ವಿಷಯ ಪ್ರಸ್ತಾಪಿಸಿದರು.

ಈ ಸಂದರ್ಭದಲ್ಲಿ ಸಾಲ ವಸೂಲಾತಿ ಮತ್ತು ಠೇವಣಿ ಸಂಗ್ರಹದಲ್ಲಿ ಉತ್ತಮ ಸಾಧನೆ ಮಾಡಿದ ಪಿಗ್ಮಿ ಏಜೆಂಟ್‌ರಾದ ಬೆಳ್ಳೂಡಿಯ ಎನ್.ಎಸ್. ವಿಜಯಕುಮಾರ್, ಕುಂಬಳೂರಿನ ಎಸ್. ಮಂಜುನಾಥ್, ಹೊಳೆಸಿರಿಗೆರೆಯ ಕೆ. ರಾಜಶೇಖರ್, ರಾಜನಹಳ್ಳಿಯ ಎಸ್.ಆರ್. ಸತೀಶ್ ಅವರನ್ನು ಸನ್ಮಾನಿಸಲಾಯಿತು. 'ಜನತಾವಾಣಿ' ವರದಿಗಾರರೂ ಆಗಿರುವ ಸಂಘದ ನಿರ್ದೇಶಕ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

ಸಂಘದ ನಿರ್ದೇಶಕರಾದ ಸಿ. ಸುರೇಶಚಾರ್, ಸಿರಿಗೆರೆಯ ಬಿ.ಶೇಖರಪ್ಪ ವೇದಿಕೆಯ ಲ್ಲಿದ್ದರು. ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ರೈಸ್ ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ, ಕುಂದೂರು ಶಿವಣ್ಣ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಪ್ರಸನ್ನ ಬಣಕಾರ್, ನಿಟ್ಟೂರು ಏಕಾಂತಪ್ಪ, ಇ.ಎಂ. ಮರುಳಸಿದ್ದೇಶ್, ವೈ. ರಂಗನಾಥ್, ದಾನಯ್ಯ, ಕೆ.ಜಿ. ಕೊಟ್ರೇಶಪ್ಪ, ಕೆ.ಜಿ. ಪರಮೇಶ್ವರಪ್ಪ, ಹುಳ್ಳಳ್ಳಿ ಸಿದ್ದೇಶ್, ಕೊಕ್ಕನೂರಿನ ಹೆಚ್. ರಂಗಪ್ಪ, ಸಿರಿಗೆರೆಯ ಮಾಗೋಡು ರವಿ ಮತ್ತಿತರರು ಭಾಗವಹಿಸಿದ್ದರು.

## ಬೊಮ್ಮಾಯಿಗೆ ವರಿಷ್ಠರ ಬುಲಾವ್

**(1ನೇ ಪುಟದಿಂದ)** ವರಿಷ್ಠರು ಘೋಷಣೆ ಮಾಡಿದ ಮೇಲೆ ಬದಲಾವಣೆ ಎಲ್ಲಿಂದ ಬಂತು ಎಂದು ಅಶೋಕ್ ಪ್ರಶ್ನಿಸಿದ್ದಾರೆ.

ಅಷ್ಟೇ ಅಲ್ಲ ಕೆಲವರು ನಾಯಕತ್ವಕ್ಕೆ ಹಗಲು ಕನಸು ಕಾಣುತ್ತಿದ್ದಾರೆ. ಸದ್ಯಕ್ಕೆ ಅವರ ಕನಸು ಈಡೇರುವುದಿಲ್ಲ ಎಂದು ಕೈಗಾರಿಕಾ ಸಚಿವ ನಿರಾಣಿ ಅವರಿಗೆ ಟಾಂಗ್ ಕೊಟ್ಟಿದ್ದಾರೆ.

ರಾಜ್ಯದ ಬೆಳವಣಿಗೆಗೆ ಬೊಮ್ಮಾಯಿ ಕೆಲಸ ಮಾಡುತ್ತಿದ್ದಾರೆ ಯಾರು ಯಾರು ಏನು ಹೇಳಿದ್ದಾರೋ ಅವರ ಅವರಿಗೆ ಬಿಟ್ಟಿದ್ದು, ನಾನು ನನ್ನ ಪ್ರಕಾರ ಸ್ಪಷ್ಟವಾಗಿ ಹೇಳುತ್ತೇನೆ. ಬೊಮ್ಮಾಯಿ ಅವರು, ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ. ಅವರ ನಾಯಕತ್ವದಲ್ಲೇ ಎಲ್ಲವೂ ನಡೆಯುತ್ತಿದೆ ಎಂದು ಶ್ರೀನಿವಾಸ ಪೂಜಾರಿ ಖಡಕ್ ಆಗಿ ಹೇಳಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ ಮಾತು ಹೃದಯ ವೈಶಾಲ್ಯತೆ ಮತ್ತು ತಾಯಿ ಹೃದಯ ಇರುವವರಿಗೆ ಗೊತ್ತಾಗುತ್ತದೆ. ಬೇರೆಯವರಿಗೆ ಅದು ಅರ್ಥವಾಗುವುದಿಲ್ಲ. ನಾಯಕತ್ವ ಬದಲಾವಣೆ ಆಗುತ್ತದೆ ಎಂದು ಅವರು ಈ ರೀತಿ ಹೇಳಿಕೆ ನೀಡಿದ್ದಾರೆ ಎಂದು ನನಗೆ ಅನಿಸುವುದಿಲ್ಲ ಎಂದಿದ್ದಾರೆ.

ಪ್ರತ್ಯೇಕವಾಗಿ ಮಾತನಾಡಿದ ಕೆಪಿಸಿಸಿ ಡಿ.ಕೆ. ಶಿವಕುಮಾರ್, ಬಸವರಾಜ ಬೊಮ್ಮಾಯಿ ಅವರು ತಮ್ಮ ಕ್ಷೇತ್ರದಲ್ಲಿ ಭಾವನಾತ್ಮಕವಾಗಿ ಹೇಳಿಕೆ ನೀಡಿದ್ದು ಸಹಜ. ಬೊಮ್ಮಾಯಿ ಅವರು ಮುಖ್ಯಮಂತ್ರಿ ಸ್ಥಾನದಿಂದ ಬದಲಾಗುತ್ತಾರೆ. ನಿರಾಣಿ ಅವರು ಮುಖ್ಯಮಂತ್ರಿ ಆಗ್ತಾರೆ ಎಂಬ ಸಚಿವ ಈಶ್ವರಪ್ಪ ಅವರ ಹೇಳಿಕೆಯಿಂದಾಗಿ ನಾಯಕತ್ವ ಬದಲಾವಣೆ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದೆ ಎಂದರು.

ರಾಜ್ಯದಲ್ಲಿ ಯಾವ ಅಧಿಕಾರಿಗಳು ಮುಖ್ಯಮಂತ್ರಿ ಮಾತು ಕೇಳುತ್ತಿಲ್ಲ. ಸುವರ್ಣ ಸೌಧದ ಕಾರಿಡಾರ್‌ಗಳಲ್ಲೇ ಸಚಿವರು ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಆಡಳಿತ ಕುಸಿತ ಕಂಡಿದೆ. ಬಿಜೆಪಿ ಎಷ್ಟಾದರೂ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿಕೊಳ್ಳಲಿ. ಯಡಿಯೂರಪ್ಪ ಅವರನ್ನೇ ಬೇಕಾದ್ರೆ ಮತ್ತೆ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಲಿ. ನಮ್ಮ ಅಭ್ಯಂತರವಿಲ್ಲ ಎಂದರು.

## ಕೊಡದಗುಡ್ಡದಲ್ಲಿ ಇಂದು ಶ್ರೀ ವೀರಭದ್ರ ಸ್ವಾಮಿ ಕಾರ್ತಿಕೋತ್ಸವ



ಜಗಳೂರು ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಇಂದು ಬಸವನ ಪೂಜೆ, ರಾತ್ರಿ 7.30 ರಿಂದ ರಾತ್ರಿ 11 ರವರೆಗೆ ಕಾರ್ತಿಕೋತ್ಸವ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಬೆಳ್ಳಿ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ.

# ಎಂ.ಇ.ಎಸ್. ಪುಂಡರನ್ನು ಗೂಂಡಾ ಕಾಯ್ದೆ ಅಡಿಯಲ್ಲಿ ಬಂಧಿಸಿ ಪ್ರಕರಣ ದಾಖಲಿಸಬೇಕು

## ರಾಜ್ಯ ರೈತ ಸಂಘದ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ ಒತ್ತಾಯ



**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ.20- ದೇಶಭಕ್ತ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ವಿರೂಪಗೊಳಿಸಿ ಕನ್ನಡ ಧ್ವಜವನ್ನು ಸುಟ್ಟು ಕನ್ನಡಿಗರ ವಾಹನಗಳನ್ನು ಜಖಂ ಗೊಳಿಸಿರುವ ಎಂ.ಇ.ಎಸ್. ಪುಂಡರನ್ನು ಬಂಧಿಸಿ ಗೂಂಡಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಒತ್ತಾಯಿಸಿದರು.

ನಗರದಲ್ಲಿ ಇಂದು ರಸ್ತೆ ತಡೆ, ಪ್ರತಿಭಟನೆ ಮಾಡಿದ ರೈತ ಪರ ಮತ್ತು ಕನ್ನಡ ಸಂಘಟನೆಗಳ ನೇತೃತ್ವವನ್ನು ವಹಿಸಿ ಅವರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯವಾದಿ ಎಸ್.ಡಿ. ಹಿರೇಮಠ, ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಅಧ್ಯಕ್ಷ ನಿತ್ಯಾನಂದ ಕುಂದಾಪುರ, ವೀರಕಂಠೀರವ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ನಾಗರಾಜ ಬಿ., ದಿನಗೂಲಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಕೊಂಗಿಯವರ, ರಕ್ಷಣಾ ವೇದಿಕೆ ಕೊಟ್ರೇಶಪ್ಪ ಎಮ್ಮಿ, ಆನಂದ ಹುಲ್ಲಮನಿ, ಸಿದ್ದಪ್ಪ ಹೂಲಿಕಟ್ಟಿ, ಆಶೋಕ ಲಿಂಗದಳ್ಳಿ, ರೈತ ಸಂಘಟನೆಯ ಹರಿಹರಗೌಡ ಎಸ್. ಪಾಟೀಲ, ಮರಿಡೆಪ್ಪ ಎಸ್. ಚಳಗೇರಿ, ಬಾಲಚಂದ್ರ ದೊಡ್ಡಮನಿ, ಜಿ.ಬಿ. ಮಾಸಣಗಿ, ಬಾಷಾಸಾಬ್ ಹಂಪಳಿ, ನಾಗರಾಜ ಸುರವೆ, ಪಿ.ಬಿ. ಬಣಕಾರ, ಡಿ.ಕೆ. ತೊಂಟಗಂಟಿ ಮುಂತಾದವರು ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರರಿಗೆ ಮನವಿ ಅರ್ಪಿಸಿದರು.

## ಆಧಾರ್ ಲಿಂಕ್ ಮಸೂದೆಗೆ ಲೋಕಸಭೆ ಸಮ್ಮತಿ

**(1ನೇ ಪುಟದಿಂದ)** ನೆಗೆ ವಹಿಸುವಂತೆ ಪ್ರತಿಪಕ್ಷಗಳು ಮುಂದಿಟ್ಟ ಬೇಡಿಕೆಯನ್ನು ತಳ್ಳಿ ಹಾಕಲಾಯಿತು.

ಪ್ರತಿಪಕ್ಷಗಳು ಪ್ರತಿಭಟನೆ ಮುಂದುವರೆಸಿದಾಗ, ಗದ್ದಲದ ನಡುವೆ ಮಸೂದೆಗೆ ಅಂಗೀಕಾರ ಪಡೆದುಕೊಂಡ ನಂತರ ಸದನವನ್ನು ಮುಂದೂಡಲಾಯಿತು. ಮಸೂದೆಯನ್ನು ಸಮಿತಿಯ ಪರಿಶೀಲನೆಗೆ ವಹಿಸಬೇಕು ಎಂಬ ಬೇಡಿಕೆಯನ್ನು ತಳ್ಳಿ ಹಾಕಿದ ರಿಜಿಜು, ಮಸೂದೆಯಲ್ಲಿರುವ ಪ್ರಸ್ತಾಪಗಳನ್ನು ಸಂಸತ್ತಿನ ಕಾನೂನು ಹಾಗೂ ಸಿಬ್ಬಂದಿ ಸ್ಥಾಯಿ ಸಮಿತಿಯೇ ಶಿಫಾರಸ್ಸು ಮಾಡಿದೆ ಎಂದಿದ್ದಾರೆ.

ಈ ಮಸೂದೆಯಿಂದ ಚುನಾವಣಾ ಪ್ರಕ್ರಿಯೆ ಸ್ವಚ್ಛವಾಗಲಿದೆ ಹಾಗೂ ಒಂದೇ ಹೆಸರು ಹಲವು ಮತಪಟ್ಟಿಗಳಲ್ಲಿ ನೋಂದಣಿಯಾಗಿರುವುದು ನಿವಾರಣೆಯಾಗಲಿದೆ ಎಂದಿದ್ದಾರೆ. ಸರ್ಕಾರ ಈ ವಿಷಯದ ಬಗ್ಗೆ ಪೂರ್ಣ ಚರ್ಚೆಗೆ ಸಿದ್ಧವಿದೆ. ಆದರೆ, ಗದ್ದಲದ ಕಾರಣದಿಂದಾಗಿ ಚರ್ಚೆ ಸಾಧ್ಯವಾಗುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

ಮತದಾರರ ನೋಂದಣಿ ಅಧಿಕಾರಿಗಳು ಜನರಿಂದ ಆಧಾರ್ ಕಾರ್ಡ್ ಪಡೆಯಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ, ಆಧಾರ್ ಕಾರ್ಡ್ ಕೊಡಲು ಬಯಸದವರು ಬೇರೆ ಗುರುತಿನ ಚೀಟಿ ನೀಡಲು ಅವಕಾಶ ಕಲ್ಪಿಸಲಾಗಿದೆ.

## ಹರಿಹರದಲ್ಲಿ ಇಂದು ಕಾರ್ತಿಕ

ಎಪಿಎಂಸಿ ಆವರಣದಲ್ಲಿರುವ ಓಂ ಶ್ರೀ ಬನ್ನಿ ಮಹಾಂಕಾಳಮ್ಮ ದೇವಿ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಅಣ್ಣಿಗೇರಿ ರಾಮಪ್ಪ ತಿಳಿಸಿದ್ದಾರೆ. ನಾಳೆ ಬುಧವಾರ ಸಂಜೆ ಓಂ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಸಂಕಷ್ಟಿ ಕಾರ್ಯಕ್ರಮ ಇರುತ್ತದೆ.

# ಮತಾಂತರ ನಿಷೇಧ ಕಾಯ್ದೆ : ಸಂಪುಟದ ತೀರ್ಮಾನ

**(1ನೇ ಪುಟದಿಂದ)** ನಡೆಯುತ್ತಿದೆ ಎಂದು ವಿಧಾನಸಭೆಯಲ್ಲೇ ತಿಳಿಸಿದ್ದರು. ಇತ್ತೀಚೆಗೆ ಮತಾಂತರ ವ್ಯಾಪಕವಾಗಿ ಆಗುತ್ತಿದೆ ಎಂದು ಹಿಂದೂ ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ತಂದಿದ್ದರು. ಅಷ್ಟೇ ಅಲ್ಲದೆ, ಇಂದು ಬೆಳಗಾವಿಯಲ್ಲಿ ವಿಶ್ವ ಹಿಂದೂ ಏರ್ಪಡಿಸಿದ್ದ ಮಠಾಧೀಶರ ಸಭೆಯಲ್ಲೂ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಮುಖ್ಯಮಂತ್ರಿಯವರ ಮೇಲೆ ಒತ್ತಡ ಹೇರಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಾ ಭಾಗವಹಿಸಿದ್ದ ಈ ಸಭೆಯಲ್ಲಿ ಹಿಂದೂಗಳನ್ನು ವ್ಯಾಪಕವಾಗಿ ಮತಾಂತರ ಮಾಡಲಾಗುತ್ತಿದೆ. ಇದನ್ನು ತಡೆಯಬೇಕೆಂದು ಸಭೆಯಲ್ಲಿ ಭಾಗವಹಿಸಿದ ಮಠಾಧೀಶರು, ಸರ್ಕಾರಕ್ಕೆ ಸಲಹೆ ಮಾಡಿದ್ದರು.

ಸಭೆಯಲ್ಲೇ ಮುಖ್ಯಮಂತ್ರಿಯವರು ಸಮಾಜದ ಭಾವನೆಗಳಿಗೆ ಹಾಗೂ ಇಚ್ಛೆಗೆ ತಕ್ಕಂತೆ ಸ್ಪಂದಿಸುತ್ತೇವೆ. ಈ ನಿಟ್ಟಿನಲ್ಲಿ ನಾವು ಸಕಾರಾತ್ಮಕವಾಗಿ ಹೆಜ್ಜೆ ಇಡುತ್ತೇವೆ. ನಮ್ಮ ಮೇಲೆ ವಿಶ್ವಾಸವಿರಲಿ ಎನ್ನುವ ಮೂಲಕ ಮಸೂದೆ ಮಂಡನೆ ಸುಳಿವನ್ನು ಮುಖ್ಯಮಂತ್ರಿ ನೀಡಿದ್ದರು.

ಅಷ್ಟೇ ಅಲ್ಲ ಹಿಂದೂ ಧರ್ಮವು ಇಡೀ ವಿಶ್ವದಲ್ಲೇ ಎಲ್ಲ ಧರ್ಮಗಳಿಗಿಂತ ಹೃದಯ ವೈಶಾಲ್ಯ ವೈಚಾರಿಕತೆ ಹೊಂದಿದೆ. ಮಾನವೀಯ ಧರ್ಮ ಪರಿಪಾಲನೆ ಮಾಡುವ ಧರ್ಮವಾಗಿದೆ. ನಮ್ಮ ಮೇಲೆ ಭೌಗೋಳಿಕವಾಗಿ ದಾಳಿಯಾಗಿದೆ. ಹಿಂದೆಲ್ಲ ಹಿಂದೂ ಧರ್ಮ ಸಂಕಷ್ಟಗೀಡಾಗಿದೆ. ಹಲವು ಸಂದರ್ಭಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮತಾಂತರ ನಡೆದಿದೆ.

ದೇಶದಲ್ಲಿರುವ ಇತರ ಧರ್ಮೀಯರ ಮೂಲ ಹುಡುಕಿದಾಗ ಅವರೆಲ್ಲೂ ಹಿಂದೂ ಧರ್ಮೀಯರಾಗಿದ್ದರು ಎನ್ನುವ ಮೂಲಕ ಸಭೆಯಲ್ಲೇ ಮತಾಂತರ ನಿಷೇಧ ಕಾಯ್ದೆಯನ್ನು ಮುಖ್ಯಮಂತ್ರಿಯವರು ಸಮರ್ಥಿಸಿಕೊಂಡಿದ್ದರು.

ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ನಾಳೆ ವಿಧಾನಸಭೆಯಲ್ಲಿ ಮತಾಂತರ ನಿಷೇಧ ಕಾಯ್ದೆ ಮಂಡನೆ ಮಾಡುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ತೀವ್ರ ವಿರೋಧ ವ್ಯಕ್ತಪಡಿಸಿ, ಕಾನೂನು ಅನುಷ್ಠಾನವಾಗದಂತೆ ತಡೆಯುವ ಪ್ರಯತ್ನ ಮಾಡಬಹುದು.

ಆಡಳಿತಾರೂಢ ಬಿಜೆಪಿ ವಿಧಾನಸಭೆಯಲ್ಲಿ ಬಹುಮತ ಹೊಂದಿರುವುದರಿಂದ ಪ್ರತಿಪಕ್ಷಗಳ ಹೋರಾಟ ಸಫಲವಾಗದು. ಇಲ್ಲಿ ಅನುಮೋದನೆ ಪಡೆದು, ವಿಧಾನಪರಿಷತ್ತಿನಲ್ಲಿ ಮಂಡನೆಯಾ ದಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮತದ ಕೊರತೆ ಇದೆ.

ಅಲ್ಲಿ ಯಾವ ರೀತಿ ಅನುಮೋದನೆ ಪಡೆದುಕೊಳ್ಳುತ್ತಾರೋ ಕಾದು ನೋಡಬೇಕು. ಬಿಜೆಪಿ ಸರ್ಕಾರ ಕಾಯ್ದೆ ಅನುಷ್ಠಾನಗೊಳಿಸಿದರೂ, ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಈ ಕಾನೂನನ್ನು ರದ್ದು ಮಾಡುವುದಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಈಗಾಗಲೇ ಘೋಷಣೆ ಮಾಡಿದ್ದಾರೆ.

ಒಂದು ಸಮಾಜವನ್ನು ಗುರಿಯಾಗಿಟ್ಟು ಕೊಂಡು ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲು ಸರ್ಕಾರ ಹೊರಟಿದೆ ಎಂದು ಕ್ರಿಶ್ಚಿಯನ್ ಪಾದ್ರಿಗಳು ಮತ್ತು ಮುಖಂಡ ರುಗಳು ಆರೋಪಿಸಿದ್ದಲ್ಲದೆ, ಯಾವುದೇ ಕಾರಣಕ್ಕೂ ಕಾನೂನನ್ನು ಜಾರಿಗೊಳಿಸ ಬಾರದೆಂದು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದರು.

ಈ ಮಧ್ಯೆ ವಿಧಾನ ಮಂಡಲದಲ್ಲಿ ಕಾಯ್ದೆ ವಿರುದ್ಧ ಹೋರಾಟ ಮಾಡಲು ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಿದೆ. ಅಲ್ಲದೆ, ತಮ್ಮ ಪಕ್ಷದ ಎಲ್ಲ ಶಾಸಕರು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕೆಂದು ಸಿಎಲ್‌ಪಿ ನಾಯಕರು ಈಗಾಗಲೇ ವಿಪ್ ನೀಡಿದ್ದಾರೆ.


ಕಾಯ್ದೆ ಅನುಷ್ಠಾನ ಹಾಗೂ 2011ನೇ ಸಾಲಿನಲ್ಲಿ ಕೆಪಿಎಸ್‌ಸಿಯಿಂದ ಆಯ್ಕೆಗೊಂಡ 350ಕ್ಕೂ ಹೆಚ್ಚು ಕೆಎಎಸ್ ಹುದ್ದೆಗಳನ್ನು ಖಾಯಂಗೊಳಿಸಲು ಅಗತ್ಯ ಮಸೂದೆಯನ್ನು ವಿಧಾನ ಮಂಡಲದಲ್ಲಿ ಮಂಡಿಸುವ ಕುರಿತು ಸಭೆಯಲ್ಲಿ ಮತ್ತೊಂದು ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

## ಎಂಇಎಸ್ ನಿಷೇಧಕ್ಕೆ ಸಿದ್ದರಾಮಯ್ಯ ಆಗ್ರಹ

**(1ನೇ ಪುಟದಿಂದ)** ಮಾತನಾಡಿದರು.

ಕನ್ನಡದ ಧ್ವಜ ಕನ್ನಡಿಗರ ಹೆಮ್ಮೆ. ಆ ಧ್ವಜವನ್ನು ಕಿಡಿಗೇಡಿಗಳು ಮಹಾರಾಷ್ಟ್ರದಲ್ಲಿ ಸುಟ್ಟು ಹಾಕಿ ಅಗೌರವ ತೋರಿಸಿದ್ದಾರೆ. ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣ ಇಡೀ ದೇಶದ ಆಸ್ತಿ. ಅವರ ಪ್ರತಿಮೆಯನ್ನು ವಿರೂಪಗೊಳಿಸಿರುವುದು ಆರೂವರೆ ಕೋಟಿ ಕನ್ನಡಿಗರು ಸೇರಿದಂತೆ ಇಡೀ ದೇಶಕ್ಕೆ ಮಾಡಿರುವ ಅವಮಾನ. ಇದು ಪುಂಡು, ಪೋಕರಿಗಳಿಗೆ ಏಕೆ ಅರ್ಥವಾಗುತ್ತಿಲ್ಲವೋ ಗೊತ್ತಿಲ್ಲ.

ಬೆಳಗಾವಿಯ ಅನಗೋಳದಲ್ಲಿ ರಾಯಣ್ಣ ಮತ್ತು ಬೆಂಗಳೂರಿನ ಸದಾಶಿವನಗರದಲ್ಲಿ ಶಿವಾಜಿಯವರು ಪ್ರತಿಮೆ ವಿರೂಪಗೊಳಿಸಲಾಗಿದೆ. ರಾಯಣ್ಣ, ಶಿವಾಜಿ, ಝಾನ್ಸಿರಾಣಿ ಲಕ್ಷ್ಮಿ ಬಾಯಿ ಈ ಎಲ್ಲರೂ ದೇಶಕ್ಕಾಗಿ ಹೋರಾಟ ಮಾಡಿದವರು. ಅಂತಹವರ ಪ್ರತಿಮೆಯನ್ನು ವಿರೂಪಗೊಳಿಸುವ ಕಿಡಿಗೇಡಿಗಳು ಬುದ್ಧಿಗೇಡಿಗಳು, ಚಾರಿತ್ರ್ಯ ಹೀನರು, ಅವಿವೇಕಿಗಳು. ಇಂತಹ ಸ್ವಾತಂತ್ರ್ಯ ಸೇನಾನಿಗಳಿಗೆ ಅವಮಾನ ಮಾಡಿದರೆ ಅದು ಇಡೀ ದೇಶಕ್ಕೆ ಮಾಡಿದ ಅವಮಾನ ಎಂಬುದು ಅವರಿಗೆ ಅರ್ಥವೇ ಆಗುತ್ತಿಲ್ಲ. ಅರ್ಥವಾಗು ವಂತೆ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. ಪುಂಡು, ಪೋಕರಿ ಗಳನ್ನು ಗಡೀಪಾರು ಮಾಡಬೇಕು ಎಂದವರು ಆಗ್ರಹಿಸಿದರು.

**4ನೇ ವರ್ಷದ ಪುಣ್ಯಸ್ಮರಣೆ**

**ಶ್ರೀಮತಿ ಸುಮಿತ್ರಮ್ಮ ಅಮರೇಶಪ್ಪ**

ನಿಧನ : 21.12.2017

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪತಿ : ಅಮರೇಶಪ್ಪ ಮೈಲೇಶ್ವರ

ಮಕ್ಕಳಾದ : ♦ ಶ್ರೀಮತಿ ನಿರ್ಮಲಾ ಎ. ರಮೇಶ್ ♦ ಶ್ರೀಮತಿ ಸವಿತ ಎ. ಬಸವರಾಜ್ ♦ ಶ್ರೀಮತಿ ವಾಣಿಶ್ರೀ ಎ. ಆನಂದ್ ♦ ಶ್ರೀಮತಿ ಕವಿತ ಷಣ್ಮುಖಪ್ಪ

ಮತ್ತು ಮೊಮ್ಮಕ್ಕಳು ಹಾಗೂ ಬಂಧುಗಳು, ಮೊ. : 94482 48080, 98862 28382


## ನಾಳೆ ಎಪಿಎಂಸಿ ದಲ್ಲಾಲರ ಸಂಘದ ಸಭೆ

ದಾವಣಗೆರೆ, ಡಿ.20- ನಗರದ ಎಪಿಎಂಸಿ ದಲ್ಲಾಲರ ಸಂಘದಲ್ಲಿ ನಾಡಿದ್ದು ದಿನಾಂಕ 22 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ದಲ್ಲಾಲರ ಸಂಘದ ಸಭೆ ಕರೆಯಲಾಗಿದೆ ಎಂದು ಸಂಘದ ಅಧ್ಯಕ್ಷ ಕಂಸಾಗರದ ಪಂಚಾಕ್ಷರಪ್ಪ ಹಾಗೂ ಕಾರ್ಯದರ್ಶಿ ಹೆಚ್. ದಯಾನಂದ್ ತಿಳಿಸಿದ್ದಾರೆ.


**ಕುಂಟಪಾಲನಹಳ್ಳಿ (ಕಲ್ಲುಬಂಡೆ) ಶ್ರೀಮತಿ ಮಂಜುಳ ನಿಧನ**



ದಾವಣಗೆರೆ ತಾಲ್ಲೂಕು ಕುಂಟಪಾಲನಹಳ್ಳಿ (ಕಲ್ಲುಬಂಡೆ) ಗ್ರಾಮದ ವಾಸಿ, ಹೊಸ ನಾಯಕನಹಳ್ಳಿ ದೊಡ್ಡ ಚೌಡಪ್ಪರ ದಿ. ಹನುಮಂತಪ್ಪ ಇವರ ಮಗನಾದ ಜಯ್ಯಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಮಂಜುಳ** (45 ವರ್ಷ)


ಇವರು ದಿನಾಂಕ 20.12.2021ನೇ ಸೋಮವಾರ ಮಧ್ಯಾಹ್ನ 2.10ಕ್ಕೆ ದೈವಾಧೀನರಾಗಿದ್ದಾರೆ. ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂದುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.12.2021ನೇ ಮಂಗಳವಾರ ಬೆಳಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಕುಂಟಪಾಲನಹಳ್ಳಿ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

ಪತಿ: **ಜಯ್ಯಪ್ಪ**, ಮಕ್ಕಳಾದ : **ಅರುಣ್ ಹೆಚ್.ಜೆ., ಕಿರಣ್ ಹೆಚ್.ಜೆ.**

**ರೇವಣಪ್ಪ ಮತ್ತು ಸಹೋದರರು ಹಾಗೂ ಬಂಧು-ಮಿತ್ರರು.**


**ಆನೆಕೊಂಡದ ನಂಜುಂಡಪ್ಪ ಸಣ್ಣ ಅಣಜಿಯವರ ನಿಧನ**



ದಾವಣಗೆರೆ ವಿದ್ಯಾನಗರ ವಾಸಿಯಾದ ಎ.ಎಸ್. ನಂಜುಂಡಪ್ಪ ನವರು (75) Ex Employees of JJM ಮೆಡಿಕಲ್ ಕಾಲೇಜ್, ದಾವಣಗೆರೆ ಇವರು ದಿನಾಂಕ : 20.12.2021ರ ಸೋಮವಾರ ಮಧ್ಯಾಹ್ನ 1.15ಕ್ಕೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 21.12.2021ರ ಮಂಗಳವಾರ ಮಧ್ಯಾಹ್ನ 11.00 ಗಂಟೆಗೆ ಮೃತರ ಸ್ವಗ್ರಾಮ ಆನೆಕೊಂಡ ಜಮೀನಿನಲ್ಲಿ ನೆರವೇರಿಸಲಾಗುವುದು.

# ಎಂಇಎಸ್-ಶಿವಸೇನೆ ಪುಂಡರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

**(1ನೇ ಪುಟದಿಂದ)** ಘೋಷಣೆ ಮೊಳಗಿಸಿದರು. ಪ್ರತಿಭಟನೆಯಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರಾದ ಟಿ.ಶಿವಕುಮಾರ್, ಎಸ್.ಜಿ.ಸೋಮಶೇಖರ್, ಕೆ.ಟಿ.ಗೋಪಾಲಗೌಡ, ಟಿ.ಅಜ್ಜೇಶಿ, ನೀರ್ಥಡಿ ಶಿವಕುಮಾರ್, ಲಿಂಗರಾಜ ನಾಯ್ಕ, ಸುನೀತಾ ಭೀಮಣ್ಣ, ಉಮಾ ತೋಟಪ್ಪ, ದಾಕ್ಷಾಯಿಣಮ್ಮ ಮಲ್ಲಿಕಾರ್ಜುನಯ್ಯ, ರಾಜೇಶ್ವರಿ ಉಮೇಶ್, ಸಂಗೀತ ಪ್ರಕಾಶ್, ದೀಪ ಶಿವರಾಜ್, ಮೇಘಾ ಶಾಂತಯ್ಯ, ನಾಗರತ್ನ ಆನಂದ್, ಶುಭಮಂಗಳ ಮತ್ತಿತರರು ಭಾಗವಹಿಸಿದ್ದರು.

## ಜಗಳೂರಿನಲ್ಲಿ ಕರವೇ ಪ್ರತಿಭಟನೆ

**(1ನೇ ಪುಟದಿಂದ)** ಸರ್ಕಾರ ಮೌನ ವಹಿಸಿರುವುದು ಖಂಡನಿಯ ಎಂದರು. ಈ ಸಂದರ್ಭದಲ್ಲಿ ಹೋರಾಟಗಾರ ಎಂ ರಾಜಪ್ಪ, ಕರವೇ ಗೌರವಾಧ್ಯಕ್ಷ ಸಂಗೊಳ್ಳಿ ಸುರೇಶ್, ತಿಪ್ಪಕ್ಕ, ಮಹಿಳಾ ಅಧ್ಯಕ್ಷೆ ರೇಖಾ ಶಂಭುಲಿಂಗಪ್ಪ, ಕರವೇ ಮುಖಂಡರಾದ ಹಫೀಜ್, ಲಿಂಗರಾಜ್, ಹರ್ಷ, ಪ್ರದೀಪಕುಮಾರ್, ರಾಘವೇಂದ್ರ, ಗುರುಪ್ರಸಾದ್, ಗೀರಿಶ್, ಜಿ.ಟಿ.ತಿಪ್ಪೇಸ್ವಾಮಿ, ಶಾಹಿನಾಬೇಗಂ, ಚಂಪಾ, ಹೇಮರೆಡ್ಡಿ, ಸತೀಶ್ ಸೇರಿದಂತೆ ಪದಾಧಿಕಾರಿಗಳು ಭಾಗವಹಿಸಿದ್ದರು.

# ಹೊನ್ನಾಳಿ ಅರ್ಬನ್ ಸೊಸೈಟಿಗೆ 60 ಲಕ್ಷ ನಿವ್ವಳ ಲಾಭ

## ಸಂಘದ 22ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷ ಡಾ. ರಾಜಕುಮಾರ್ ಸಂತಸ



ಹೊನ್ನಾಳಿ, ಡಿ.20- ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಪಟ್ಟಣದಲ್ಲಿ ಕಳೆದ 22 ವರ್ಷಗಳಿಂದ 5,485 ಸದಸ್ಯರನ್ನು ಹೊಂದಿ ಸುಲಲಿತವಾಗಿ ಆರ್ಥಿಕ ವ್ಯವಹಾರ ನಡೆಸುತ್ತಾ, ಪ್ರಸ್ತುತ ಸಾಲಿನಲ್ಲಿ 60.37 ಲಕ್ಷ ರೂ.ನಿವ್ವಳ ಲಾಭ ಗಳಿಸಿದೆ ಎಂದು ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಡಾ. ರಾಜಕುಮಾರ್ ಹೇಳಿದರು.

ಪಟ್ಟಣದ ಹಳೇಪೇಟೆ ಶ್ರೀ ವಿಠಲ ಮಂದಿರದಲ್ಲಿ 22 ವರ್ಷದ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವರ್ಷದ ಆರಂಭದಲ್ಲಿ ಸೊಸೈಟಿಯು ಸದಸ್ಯರುಗಳಿಂದ ವಿವಿಧ ರೀತಿಯ 17.64 ಕೋಟಿ ರೂ. ಸಂಗ್ರಹವಾಗಿದ್ದು, ವರ್ಷಾಂತ್ಯಕ್ಕೆ 19.62 ಕೋಟಿ ರೂ. ಠೇವಣಿ ಸಂಗ್ರಹವಾಗಿದೆ ಎಂದರು.

ಸದಸ್ಯರುಗಳಿಗೆ 18 ಕೋಟಿ ರೂ ಸಾಲಸೌಲಭ್ಯ ನೀಡಿದೆ. 2020-21ನೇ ಸಾಲಿಗೆ 60.37 ಲಕ್ಷ ರೂ.ನಿವ್ವಳ ಲಾಭ ಗಳಿಸಿರುತ್ತದೆ. ಪ್ರಸ್ತುತ ಸಾಲಿಗೆ ಶೇ.12 ರಷ್ಟು ಷೇರು ಲಾಭಾಂಶ ನೀಡಲು ಆಡಳಿತ ಮಂಡಳಿ ಘೋಷಿಸಿದೆ.

ಸೊಸೈಟಿಯಲ್ಲಿ ಎಲ್ಲಾ ರೀತಿಯ ಸಾಲ-ಸೌಲಭ್ಯ ವಿರುತ್ತದೆ. ಜೊತೆಗೆ ವಿಮಾ ಯೋಜನೆ ಇದ್ದು ಷೇರುದಾರರು ಅಪಘಾತದಿಂದ ಮರಣ ಹೊಂದಿದರೆ 1 ಲಕ್ಷ ರೂ ವಾರಸುದಾರರಿಗೆ ವಿಮಾ ಹಣವನ್ನು ನೀಡಲಾಗುವುದು. ಸಂಘದ ವತಿಯಿಂದ 3 ಸಾವಿರ ನೀಡುತ್ತಿದ್ದನ್ನು ಮುಂದಿನ ದಿನಗಳಲ್ಲಿ 5ಸಾವಿರ ನೀಡಲಾಗುವುದು ಎಂದರು.

ಸೊಸೈಟಿಯ ಕಾರ್ಯದರ್ಶಿ ಕುಮಾರ ವಾರ್ಷಿಕ ಜಮಾ-ಖರ್ಚನ್ನು ಓದಿದರು.

ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷ ಹೆಚ್. ವೀರೇಶಪ್ಪ, ನಿರ್ದೇಶಕರಾದ ಜಿ.ಆರ್. ಪ್ರಕಾಶ್, ಎನ್.ಜಯರಾವ್, ಹೆಚ್. ಎಂ.ಶಿವಮೂರ್ತಿ, ಬಿ.ಎಚ್.ರಾಜನಾಯ್ಕ್, ಹೆಚ್.ಬಿ.ಮೋಹನ್, ಕೆ.ಆರ್.ನಾಗರಾಜ್, ಸಿ.ಕೆ.ರವಿಕುಮಾರ, ಬಿ.ಹೆಚ್.ಉಮೇಶ್, ಹೆಚ್.ಎಂ. ಅರುಣ್‌ಕುಮಾರ್, ಎನ್. ಪ್ರಸಾದ್, ಹೆಚ್.ಕೆ.ರೂಪ, ಎನ್.ಎನ್. ನಾಗರತ್ನ, ಎನ್.ಶಾಂತಲಾ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕೊಮಾರನಹಳ್ಳಿಯಲ್ಲಿ ಸಂಭ್ರಮದ ಕನಕ ಜಯಂತಿ



ಮಲೇಬೆನ್ನೂರು, ಡಿ. 20- ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ ದಾಸ ಶ್ರೇಷ್ಠ ಶ್ರೀ ಭಕ್ತ ಕನಕದಾಸರ 534ನೇ ಜಯಂತ್ಯೋತ್ಸವವನ್ನು ಭಾನುವಾರ ಸಂಭ್ರಮದಿಂದ ಆಚರಿಸಲಾಯಿತು.

ಬೆಳಿಗ್ಗೆ ಬೈಕ್ ರಾಲಿ ಮಾಡಿದ ಯುವಕರು ಮಧ್ಯಾಹ್ನ ಕನಕದಾಸರ ಮೂರ್ತಿಗೆ ಮಾಲಾರ್ಪಣೆ ಮಾಡಿ ಅನ್ನ ಸಂತರ್ಪಣೆ ನಡೆಸಿಕೊಟ್ಟರು. ಸಂಜೆ ಗ್ರಾಮದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಕನಕ ದಾಸರ ಮೂರ್ತಿಯ ಮೆರವಣಿಗೆ ವಿಜೃಂಭಣೆಯಿಂದ ಜರುಗಿತು. ಶಾಸಕ ಎಸ್. ರಾಮಪ್ಪ ಅವರು ಕನಕಸ ದಾಸರ ಮೂರ್ತಿಗೆ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ಮಾಜಿ ಶಾಸಕ ಬಿ.ಪಿ. ಹರೀಶ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯರಾದ ಬಿ.ಎಂ. ವಾಗೀಶ್ ಸ್ವಾಮಿ, ಎಂ. ನಾಗೇಂದ್ರಪ್ಪ, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ತಾ.ಪಂ.ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ತಾ. ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಮುಖಂಡರಾದ ಕೆ. ಷಣ್ಮುಖ, ಐರಣಿ ಮಹೇಶ್ವರಪ್ಪ, ಅಜ್ಜಪ್ಪ, ಮಲೇಬೆನ್ನೂರು ಪಿಎಸಿಎಸ್. ಅಧ್ಯಕ್ಷ ಪಿ.ಆರ್. ಕುಮಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್.ಎಂ. ಮಂಜುನಾಥ್, ಗ್ರಾ.ಪಂ. ಸದಸ್ಯರಾದ ಮಡಿವಾಳರ ಬಸವರಾಜ್, ನೇತ್ರಾವತಿ ಹನುಮಂತ, ಕಮಲಾಬಾಯಿ ಪರಮೇಶ್ವರನಾಯ್ಕ ಮತ್ತು ಮಲೇಬೆನ್ನೂರಿನ ಎ. ಆರೀಫ್ ಅಲಿ, ಕೊಕ್ಕನೂರಿನ ಸೋಮಶೇಖರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕನಕ ಬ್ರಿಗೇಡ್‌ನ ಜಿ.ಎಂ. ಸುನೀಲ್, ಉದ್ದಣ್ಣರ ಅಣ್ಣಪ್ಪ, ಐ.ಆರ್. ಚಿದಂಬರ್, ಎಸ್.ಎಂ. ಪ್ರತಾಪ್, ಎಸ್.ಜಿ. ವಿಜಯ, ಅಣ್ಣಯ್ಯ, ಅನಿಲ್ ಮತ್ತಿತರರು ಹಾಜರಿದ್ದು ಕಾರ್ಯಕ್ರಮ ನಡೆಸಿಕೊಟ್ಟರು.

# ಪುನೀತ್ ರಾಜಕುಮಾರ್ ಬಡಾವಣೆ ನಾಮಫಲಕ ಉದ್ಘಾಟನೆ



ದಾವಣಗೆರೆ, ಡಿ.20- ಸುಬ್ರಹ್ಮಣ್ಯ ನಗರದ ಪಕ್ಕದಲ್ಲಿರುವ ಹೊಸ ಬಡಾವಣೆಗೆ ನಟ, ಅನಾಥ ಮಕ್ಕಳ ರಕ್ಷಕ, ವೃದ್ಧರಿಗೂ ಸಹಾಯ ಹಸ್ತ ನೀಡಿ, ಹೆಸರು ಮಾಡಿದ್ದ ದಿ|| ಪುನೀತ್ ರಾಜ್‌ಕುಮಾರ್ ಬಡಾವಣೆ ಹೆಸರಿನ ನಾಮ ಫಲಕವನ್ನು ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಸೋಮಲಾಪುರದ ಹನುಮಂತಪ್ಪ ಅನಾವರಣ ಮಾಡಿದರು.

ಸಮಾರಂಭದ ಅಧ್ಯಕ್ಷ ತೆಯನ್ನು ಸುರೇಶ್ ಕೆ.ಜಿ. ವಹಿಸಿದ್ದರು. ಉಪಾಧ್ಯಕ್ಷ ತಿಪ್ಪೇಸ್ವಾಮಿ.ಟಿ., ಕಾರ್ಯದರ್ಶಿ ನಾಗರಾಜ್ ಡಿ.ಎಸ್., ಸಹ ಕಾರ್ಯದರ್ಶಿ ತಿಪ್ಪೇಸ್ವಾಮಿ ಎಸ್., ಖಜಾಂಚಿ ರಾಜು.ಬಿ, ಸದಸ್ಯರುಗಳಾದ ಶಿವರುದ್ರಪ್ಪ ಟಿ., ಉಮೇಶ್.ಹೆಚ್., ವಿಜಯ ಕುಮಾರ್, ಮಂಜುನಾಥ್ ಹೆಚ್.ಬಿ., ದಾದಾ ಬುಡೇನ್ ಆರ್., ಮಹಮ್ಮದ್ ರಫೀಖ್, ಅಭಿಷೇಕ್. ಎಂ.ಎಂ., ರಾಜೇಶ್ ಎಂ., ಅಶೋಕ್, ಉಮೇಶ್ ಸಿ.ಹೆಚ್., ಚೇತನ್ ಎಂ., ಮಹಿಳಾ ಸದಸ್ಯರಾದ ಉಮಾ ಎಸ್.ಕೆ., ಪ್ರಮೀಳಾ, ಮಮತ, ಅನಿತ, ಪಲ್ಲವಿ, ಭಾಗ್ಯ, ಶೀಲಾಬಾಯಿ, ಲಕ್ಷ್ಮಿ ಜಿ.ವಿ., ಮಮತ, ವಿಮಲ ಮತ್ತಿತರರಿದ್ದರು.

# 'ಗೂಗಲಿಸಂ'ನಿಂದ ಹೊರಬನ್ನಿ

## 'ಗುರುಚೇತನ' ಹಾಗೂ 'ಗುರುಶ್ರೇಷ್ಠ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಿಕ್ಷಕರಿಗೆ ವಿಶ್ರಾಂತ ಕುಲಸಚಿವ ಪ್ರೊ.ಬಿ.ಬಕ್ಕಪ್ಪ ಸಲಹೆ





ದಾವಣಗೆರೆ, ಡಿ.20- ಶಿಕ್ಷಕರು 'ಗೂಗಲಿಸಂ' ನಿಂದ ಹೊರ ಬರಬೇಕು. ವಿಮರ್ಶಾತ್ಮಕ ಚಿಂತನೆ, ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ವಿಶ್ರಾಂತ ಕುಲಸಚಿವ ಪ್ರೊ.ಬಿ. ಬಕ್ಕಪ್ಪ ಸಲಹೆ ನೀಡಿದರು.

ಶಿಕ್ಷಣ ತಜ್ಞ ಡಾ.ಹೆಚ್.ವಿ. ವಾಮದೇವಪ್ಪ ಚಾರಿಟಬಲ್ ಮತ್ತು ಎಜುಕೇಷನಲ್ ಟ್ರಸ್ಟ್‌ನಿಂದ ನಗರದ ಮಾಗನೂರು ಬಸಪ್ಪ ಶಾಲಾ ಸಭಾಂಗಣದಲ್ಲಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ 'ಗುರುಚೇತನ' ಹಾಗೂ 'ಗುರುಶ್ರೇಷ್ಠ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೂಗಲ್‌ನಲ್ಲಿ ದೊರೆಯುವ ಮಾಹಿತಿ ಎಲ್ಲವೂ ಸತ್ಯವೆಂದು ಸ್ವೀಕರಿಸುವ ಮನೋಭಾವ ಕಡಿಮೆಯಾಗಬೇಕು. ವಿಷಯಗಳನ್ನು ವಿಮರ್ಶೆಗೊಳಪಡಿಸಬೇಕು ಎಂದು ಕಿವಿ ಮಾತು ಹೇಳಿದರು.

ತಂತ್ರಜ್ಞಾನದ ಬೆಳವಣಿಗೆಯನ್ನು ಗುರುತಿಸಿ ಅಳವಡಿಸಿಕೊಂಡಾಗ ಯಶಸ್ವಿ ಶಿಕ್ಷಕರಾಗಲು ಸಾಧ್ಯವಿದೆ. ಮಾನವೀಯತೆ, ವೈಚಾರಿಕತೆ ಮತ್ತು ಅನುಭವವಾದದ ಮೂಲಕ ಶಿಕ್ಷಣಕ್ಕೆ ಹೊಸ ಕಲ್ಪನೆ ಕೊಟ್ಟಾಗ ವ್ಯಕ್ತಿ, ಸಮಾಜ ಹಾಗೂ ದೇಶದ ಪ್ರಗತಿ ಸಾಧ್ಯ ಎಂದು ಪ್ರತಿಪಾದಿಸಿದರು.

ಮಕ್ಕಳಲ್ಲಿ ಸೃಜನಶೀಲತೆ ಗುಣ ಬೆಳೆಸಿದಾಗ ದೇಶ ಪ್ರಗತಿಯತ್ತ ಸಾಗುತ್ತದೆ. ಇತ್ತೀಚಿನ ವರದಿ ಪ್ರಕಾರ ಭಾರತ ಜನ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಹಿಂದುಳಿದಿದೆ. ವಿದ್ಯಾರ್ಥಿಗಳಲ್ಲಿ ಚಿಂತನಾ ಶಕ್ತಿ ಬೆಳೆಸದೆ ಸುಮ್ಮನೆ ಒಪ್ಪಿಕೊಳ್ಳುವ ಮನೋಭಾವ ಬೆಳೆಸುತ್ತಿರುವುದೇ ಇದಕ್ಕೆ ಕಾರಣ ಎಂದು ಅಭಿಪ್ರಾಯಿಸಿದರು.

ಮಾನವೀಯ ಮೌಲ್ಯಗಳು ಮರೆಯಾದ ಪರಿಣಾಮ ಹೆತ್ತವರನ್ನೂ ನೋಡಿಕೊಳ್ಳಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ವೃದ್ಧಾಶ್ರಮಗಳು ಹೆಚ್ಚುತ್ತಿವೆ. ಸಮಾಜ ತಲೆ ತಗ್ಗಿಸುವಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ ಅವರು, ಹೇಗಾದರೂ ಸರಿ ಬದುಕಿದರೆ ಸಾಕು ಎಂಬ ಮನೋಭಾವ ಬಿಟ್ಟು ತಪ್ಪು ಹಾಗೂ ಸರಿಗಳನ್ನು ಗುರುತಿಸಿ ಸರಿಯಾದ ದಾರಿಯಲ್ಲಿ ನಡೆಯಬೇಕು ಎಂದರು.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಶಿಕ್ಷಣ ಕಾಲೇಜು ಪ್ರಾಚಾರ್ಯರಾದ ಡಾ.ಪ್ರಭಾ ಎಸ್.ಗುಡ್ಡದಾನೇಶ್ವರಿ ಅವರಿಗೆ ಗುರುಚೇತನ ಪ್ರಶಸ್ತಿಯನ್ನು ಹಾಗೂ ಹೊನ್ನಾಳಿ ತಾಲ್ಲೂಕು ಟಿ. ಗೋಪಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಕೆ.ಎಸ್. ರಾಮಚಂದ್ರ ಅವರಿಗೆ ಗುರುಶ್ರೇಷ್ಠ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

'ಗುರುಚೇತನ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಪ್ರಭಾ ಎಸ್.ಗುಡ್ಡದಾನೇಶ್ವರಿ, ಸಮಾಜಲ್ಲಿ ಒಳ್ಳೆಯದು ಹಾಗೂ ಕೆಟ್ಟದ್ದು ಎರಡೂ ಇರುತ್ತದೆ. ಶಿಕ್ಷಕರು ಕೆಟ್ಟದ್ದರ ಬಳಿಗೆ ಹೋಗುವ ನೊಣಗಳಾಗದೆ, ಒಳ್ಳೆಯದನ್ನು ಸ್ವೀಕರಿಸುವ ಜೇನು ನೊಣಗಳಂತಾಗಬೇಕು ಎಂದು ಹೇಳಿದರು.

ವಿಶ್ವದಲ್ಲಿನ ಬದಲಾವಣೆಗಳ ಬಗ್ಗೆ ಸದಾ ಕುತೂಹಲಿಗಳಾಗಿರಬೇಕು. ನಡೆ ಹಾಗೂ ನುಡಿಯಲ್ಲಿ ಸಂಸ್ಕೃತಿ, ಸಂಸ್ಕಾರ ಇರಬೇಕು. ನುಡಿದಂತೆ ನಡೆದಾಗ ಮಾತ್ರ ನಮ್ಮನ್ನು ಸಮಾಜ ಗುರುತಿಸಲು ಸಾಧ್ಯವಾಗುತ್ತದೆ ಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ದಾವಿವಿ ಸಹ ಪ್ರಾಧ್ಯಾಪಕರುಗಳಾದ ಡಾ.ಬಿ.ಸಿ. ಪ್ರಸನ್ನಕುಮಾರ್ ಹಾಗೂ ಡಿ.ಜಿ. ಪ್ರಕಾಶ್ ಅವರಿಗೆ ಅಭಿನಂದಿಸಲಾಯಿತು. ಟ್ರಸ್ಟ್‌ನ ಸಂಸ್ಥಾಪಕ ಡಾ.ಹೆಚ್.ವಿ. ವಾಮದೇವಪ್ಪ, ಅಧ್ಯಕ್ಷ ಪ್ರೊ.ಹೆಚ್.ಎಸ್. ಶಾಂತವೀರಪ್ಪ, ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಕಾರ್ಯದರ್ಶಿ ಎಂ.ಬಿ. ಸಂಗಮೇಶಗೌಡರು, ಸಹಾಯಕ ಪ್ರಾಧ್ಯಾಪಕ ಧನಂಜಯ್ ಇತರರು ಉಪಸ್ಥಿತರಿದ್ದರು.

ಡಾ.ಬಸವರಾಜ ಸೋಮನಹಳ್ಳಿ ಸ್ವಾಗತಿಸಿದರು. ಕು. ಅನುಷಾ ಪ್ರಾರ್ಥಿಸಿದರು. ಶ್ರೀಮತಿ ಆಶಾ ಜಿ.ಹೆಚ್. ನಿರೂಪಿಸಿದರು. ಎಸ್.ಎಸ್.ಎಂ.ಬಿ. ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕಿ ಡಾ.ಅನಿತಾ ಜಿ. ವಂದಿಸಿದರು.

# ಸಾಲಗಳ ಮೇಲಿನ ಬಡ್ಡಿ ದರ ಕಡಿಮೆ ಮಾಡಲು ನಿರ್ಧಾರ

## ಹೊನ್ನಾಳಿಯ ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷ ಜೆ. ಶ್ರೀಕಾಂತ್



ಹೊನ್ನಾಳಿ, ಡಿ.20- ಸರ್ವ ಸದಸ್ಯರ ಬೇಡಿಕೆಯ ಮೇರೆಗೆ, ಸಾಲ ಪಡೆದಿರುವವರ ಹಿತರಕ್ಷಣೆಯ ಉದ್ದೇಶದಿಂದ ಮತ್ತು ಕೊರೊನಾ ಹಿನ್ನೆಲೆಯಲ್ಲಿ ಆರ್ಥಿಕ ಹಿನ್ನಡೆ ಉಂಟಾಗಿರುವ ಕಾರಣ ಸೊಸೈಟಿ ವತಿಯಿಂದ ವಿತರಿಸಲಾಗುವ ಸಾಲಗಳ ಮೇಲಿನ ಬಡ್ಡಿ ದರವನ್ನು ಕಡಿಮೆ ಮಾಡಲು ನಿರ್ಧರಿಸಲಾಗಿದೆ ಎಂದು ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಜೆ. ಶ್ರೀಕಾಂತ್ ಹೇಳಿದರು.

ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದ ಶ್ರೀ ತರಳಬಾಳು ಸಮುದಾಯ ಭವನದಲ್ಲಿ ಸೋಮವಾರ ಹಮ್ಮಿಕೊಂಡ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಾರಿ ಷೇರುದಾರರಿಗೆ ಡಿವಿಡೆಂಡ್ ವಿತರಿಸಲಾಗುವುದಿಲ್ಲ. ಕೆಲ ವರ್ಷಗಳಿಂದ ಅಪೂರ್ಣವಾಗಿರುವ ಗೊಲ್ಲರಹಳ್ಳಿ ಗ್ರಾಮದ ಶ್ರೀ ತರಳಬಾಳು ಸಮುದಾಯ ಭವನದ ಕಾಮಗಾರಿಗೆ ಪ್ರಸಕ್ತ ಸಾಲಿನ ಲಾಭಾಂಶವನ್ನು ನೀಡಲಾಗುವುದು. ಈ ನಿಟ್ಟಿನಲ್ಲಿ ಉದಾರ ಮನೋಭಾವ ಪ್ರದರ್ಶಿಸಿರುವ ಷೇರುದಾರರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಹಿಂದಿನ ವರ್ಷದ ಸಭಾ ನಡಾವಳಿ ಬಗ್ಗೆ ವಿವರಿಸಿ, ಜಮಾ-ಖರ್ಚಿನ ವಿವರ ಮಂಡಿಸಿದ ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಕಾರ್ಯದರ್ಶಿ ಎಚ್.ಎನ್. ರುದ್ರೇಶ್ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ ತರಗತಿಗಳ 30 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗಿದೆ ಎಂದು ಹೇಳಿದರು.

ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಜೆ. ಶ್ರೀಕಾಂತ್ ವಾರ್ಷಿಕ ವರದಿ ಮಂಡಿಸಿದರು. ಉಪಾಧ್ಯಕ್ಷ ಎಸ್. ನಾಗರಾಜಪ್ಪ, ನಿರ್ದೇಶಕರಾದ ಕೆ.ಎಂ. ಬಸವಲಿಂಗಪ್ಪ, ಎಸ್.ಎಂ. ಶಕುಂತಲಾ, ಎಂ.ಜಿ. ಬಸವರಾಜಪ್ಪ, ಎಂ.ಸಿ. ನಾಗೇಂದ್ರಪ್ಪ, ಕೆ. ಸಿದ್ದೇಶ್ವರಪ್ಪ, ಆರ್.ಸಿ. ಶಂಕರಗೌಡ, ಪಿ.ಬಿ, ಶೈಲೇಶ್, ಕೆ.ಎಸ್. ಶಿವಕುಮಾರ್, ಎಂ.ಆರ್. ವಿಕಾಸ್, ಕೆ.ಜಿ. ಮಂಜುಳಾ, ಎನ್. ಕೃಷ್ಣಾನಾಯ್ಕ, ಯು. ಮಲ್ಲೇಶಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಿಹರದಲ್ಲಿ ಇಂದು ರಕ್ತದಾನ, ನೇತ್ರದಾನ ಶಿಬಿರ



ಹರಿಹರ, ಡಿ. 20- ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಅವರ ಹುಟ್ಟುಹಬ್ಬದ ಅಂಗವಾಗಿ ಶ್ರೀನಿವಾಸ್ ಸ್ನೇಹ ಬಳಗ ಮತ್ತು ಹರಿಹರ ಯುವ ಸೈನ್ಯ ಹಾಗೂ ಶ್ರೀನಿವಾಸ್ ಗ್ರಾಮಾಂತರ ಅಭಿಮಾನಿ ಬಳಗದ ವತಿಯಿಂದ ನಾಳೆ ದಿನಾಂಕ 21ರ ಮಂಗಳವಾರ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಯುವಸೈನ್ಯದ ಸುಚೇತ್ ಪೂಜಾರ್ ತಿಳಿಸಿದರು.

ನಗರದಲ್ಲಿ ಭಾನುವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ 10 ಗಂಟೆಗೆ ರಕ್ತದಾನ ಶಿಬಿರ, ನೇತ್ರದಾನ ಶಿಬಿರಕ್ಕೆ ಶ್ರೇಯ ಆಸ್ಪತ್ರೆ ಆವರಣದಲ್ಲಿ ಚಾಲನೆ ನೀಡಲಾಗುವುದು.

ಮಧ್ಯಾಹ್ನ 12 ಗಂಟೆಗೆ ಭಾನುವಳ್ಳಿಯ ಶ್ರೀ ಬೀರೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ, ಮಧ್ಯಾಹ್ನ 2ಕ್ಕೆ ಜಿ.ಟಿ. ಕಟ್ಟೆ ಗ್ರಾಮದ ಸಹಿಪ್ರಾ ಶಾಲೆಗೆ ಪ್ರೊಜೆಕ್ಟರ್ ಹಸ್ತಾಂತರ, ಮಧ್ಯಾಹ್ನ 3 ಗಂಟೆಗೆ ಹರಳಹಳ್ಳಿ ಸಹಿಪ್ರಾ ಶಾಲೆಗೆ ಚಿಣ್ಣರ ಅಂಗಳ ಕಾರ್ಯಕ್ರಮ ವೀಕ್ಷಿಸಲು ಸ್ಮಾರ್ಟ್ ಟಿವಿ ನೀಡಲಾಗುವುದು ಎಂದು ತಿಳಿಸಿದರು.

ಜನವರಿ 13 ರಿಂದ 16ರವರೆಗೆ ದ್ವಿತೀಯ ಬಾರಿಗೆ ರಾಜ್ಯಮಟ್ಟದ ನಾಕೌಟ್ ಕ್ರಿಕೆಟ್ ಪಂದ್ಯಾವಳಿಗಳನ್ನು ಏರ್ಪಡಿಸಲಾಗಿದೆ ಎಂದು ಸ್ನೇಹ ಬಳಗದ ವೆಂಕಟೇಶ್ ಶೆಟ್ಟಿ ತಿಳಿಸಿದ್ದಾರೆ.

ಶ್ರೀನಿವಾಸ್ ಅಭಿಮಾನಿ ಬಳಗದ ಸುರೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಶ್ರೀ ಸಿದ್ದಗಂಗಾ ಮಕ್ಕಳ ಲೋಕದಲ್ಲಿ ಮಕ್ಕಳ ದಿನಾಚರಣೆ

ದಾವಣಗೆರೆ, ಡಿ..20- ನಿಟುವಳ್ಳಿಯ ಶ್ರೀ ಸಿದ್ದಗಂಗಾ ಮಕ್ಕಳ ಲೋಕದಲ್ಲಿ ಕನ್ನಡ ರಾಜ್ಯೋತ್ಸವ , ಮಕ್ಕಳ ದಿನಾಚರಣೆ ಮತ್ತು ಚಿತ್ರನಟ ಪುನೀತ್ ರಾಜಕುಮಾರ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಕೆ.ಎನ್.ಸ್ವಾಮಿ ವಹಿಸಿದ್ದರು. ಪ್ರಾಚಾರ್ಯರಾದ ಸಿ.ಕೆ.ರುದ್ರಾಕ್ಷಿ ಬಾಯಿ, ನಿರ್ದೇಶಕಿ ರುಕ್ಮಾಬಾಯಿ, ಹಿರಿಯ ಕವಿ ಚಿನ್ನಸಮುದ್ರದ ಪುಟ್ಟಾನಾಯ್ಕ, ಗಾಯಕಿ ಪಿ.ಆರ್.ಐಸಿರಿ ಪಾಲ್ಗೊಂಡಿದ್ದರು.

# ಹರಿಹರ : ಸಂಕ್ರಾಂತಿಗೆ ನದಿ ಸ್ವಚ್ಛತಾ ಕಾರ್ಯ




ಹರಿಹರ, ಡಿ.20 - ನಗರದ 'ನನ್ನ ಊರು ನನ್ನ ಹೊಣೆ' ಸಂಘಟನೆ ವತಿಯಿಂದ ಸಂಕ್ರಾಂತಿ ಹಬ್ಬದ ನಿಮಿತ್ತವಾಗಿ ನಗರದ ತುಂಗಭದ್ರಾ ನದಿಯ ಮಡಿಲಲ್ಲಿ ಸ್ವಚ್ಛತಾ ಕಾರ್ಯಗಳನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಕೆ.ಜಿ.ಸಿದ್ದೇಶ್, 'ನನ್ನ ಊರು ನನ್ನ ಹೊಣೆ' ಮುಖ್ಯಸ್ಥ ಆರ್.ರಾಘವೇಂದ್ರ, ರವಿಶಂಕರ್ ಗದ್ದಿಮಠ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಅಂಜು ಸುರೇಶ್ ರಾಜನ್ನವರ್, ಕರಿಬಸಪ್ಪ ಕಂಚಿ ಕೇರಿ, ಮಂಜುನಾಥ್ ಗದ್ದಿಮಠ್, ರುದ್ರೇಗೌಡ, ರಮೇಶ್, ಮಧು ಕುಮಾರ್, ಗಣೇಶ್ ಇತರರು ಹಾಜರಿದ್ದರು.

# ರಾಣೇಬೆನ್ನೂರು : ಹೊನ್ನಮ್ಮ ದೇವಿ ಕಾರ್ತಿಕ




ಸುಕ್ಷೇತ್ರ ವೆಂದೇ ಹೆಸರಾದ ರಾಣೇಬೆನ್ನೂರು ತಾಲ್ಲೂಕಿನ ಗುಡಿಹೊನ್ನತ್ತಿ ಗ್ರಾಮದ ಶ್ರೀ ಹೊನ್ನಮ್ಮ ದೇವಿಯ ಕಾರ್ತಿಕ ಮಹೋತ್ಸವ ಶ್ರೀಹೊನ್ನಮ್ಮದೇವಿ ದೇವಸ್ಥಾನದ ಆಡಳಿತಾಧಿಕಾರಿ ವ ತಹಶೀಲ್ದಾರ್ ಅವರ ಆಶ್ರಯದಲ್ಲಿ ಇಂದು ರಾತ್ರಿ 7 ಘಂಟೆಗೆ ನೆರವೇರುವುದು.


## ಮಳಿಗೆ ಹೊಂದಲು ಸುವರ್ಣಾವಕಾಶ

**ಶ್ರೀ ವಿಶ್ವಕರ್ಮ ವಿದ್ಯಾರ್ಥಿ ನಿಲಯ, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆಯ ವಿದ್ಯಾರ್ಥಿ ನಿಲಯದ ಮುಂಭಾಗದಲ್ಲಿರುವ ಖಾಲಿ ಜಾಗೆಯಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಸಮಿತಿ ತೀರ್ಮಾನಿಸಿದೆ. ವಾಣಿಜ್ಯ ಮಳಿಗೆ ಬೇಕಾದ ಆಸಕ್ತ ವಿಶ್ವಕರ್ಮ ಬಂಧುಗಳಿಗೆ 2 ವಾಣಿಜ್ಯ ಮಳಿಗೆಗಳನ್ನು ಹೊಂದಲು ಅವಕಾಶವಿದ್ದು, ಇಚ್ಛೆಯುಳ್ಳವರು ತಕ್ಷಣ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರನ್ನು ಸಂಪರ್ಕಿಸಬಹುದಾಗಿದೆ.**

| ಉಪಾಧ್ಯಕ್ಷರು | ಗೌ. ಕಾರ್ಯದರ್ಶಿ | ಅಧ್ಯಕ್ಷರು |
|---|---|---|
| 9845692504 | 9448873275 | 9985078139 |



## ಬೈಂಕ ಆಫ़ ಇಂಡಿಯಾ Bank of India

ಶಾಖೆ : ದಾವಣಗೆರೆ.

## ಸ್ಥಿರಾಸ್ತಿ ಸ್ವಾಧೀನ ನೋಟೀಸ್

(ರೂಲ್ - 8 (1))

ಕೆಳ ಕಾಣಸಿದ ಸಹಿದಾರರು ಬ್ಯಾಂಕ್ ಆಫ್ ಇಂಡಿಯಾ, ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, 2002ನೇ ವಿತ್ತ ಸೊತ್ತುಗಳ ಭದ್ರತಾ ವ್ಯಾಪ್ತಿಗೊಳಪಡಿಸುವಿಕೆ ಹಾಗೂ ಪುನರ್ ನಿರ್ಮಾಣ ಮತ್ತು ಸಕ್ರಿಯ ಜಾರಿ ಕಾಯ್ದೆ (ಸರ್ಫೇಸಿ)ಯ ಪ್ರಕರಣ 13 (12)ರ ಮತ್ತು 2002ನೇ ಭದ್ರತಾಸಕ್ತಿ ಜಾರಿ ನಿಯಮಗಳ 3 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಾಲ ಮರುಪಾವತಿ ಬೇಡಿಕೆ ನೋಟಿಸನ್ನು ದಿನಾಂಕ : 13.10.2021 ರಂದು ಸಾಲಗಾರರಾದ ಶ್ರೀ ವಾಗೀಶ್ ಟಿ.ಎಂ. ಮತ್ತು ಸಹ-ಸಾಲಗಾರರಾದ : ಶ್ರೀಮತಿ ವಾಣಿ ವಾಗೀಶ್ ಟಿ.ಎಂ. ಇವರಿಗೆ ನೀಡಿದ್ದು, ನೋಟೀಸಿನಲ್ಲಿ ಕಾಣಿಸಿದ ಮೊಬಲಗು ರೂ. 17,32,528.00 (ರೂಪಾಯಿ ಹದಿನೇಳು ಲಕ್ಷದ ಮೂವತ್ತೆರಡು ಸಾವಿರದ ಐದು ನೂರ ಇಪ್ಪತ್ತೆಂಟು) (ದಿನಾಂಕ : 15.12.2021ರ ವರೆಗೆ ಒಡಂಬಡಿತ ಬಾಕಿ) ಮತ್ತು 29.01.2019 ರಿಂದ ತಿಂಗಳ ಮಾಸಿಕ ಆಧಾರದ ಮೇಲೆ ಶೇಕಡ 8.80ರಂತೆ ವಾರ್ಷಿಕ ಬಡ್ಡಿಯನ್ನು ನೋಟಿಸ್ ತಲುಪಿದ 60 ದಿನಗಳ ಒಳಗಾಗಿ ಮರು ಪಾವತಿಸಲು ಸೂಚಿಸಲಾಗಿತ್ತು. ಸಾಲಗಾರರು ಮೊತ್ತವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿದ್ದು, ಸಾಲಗಾರರು ಹಾಗೂ ಸಾರ್ವಜನಿಕರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ಸಹಿ ಮಾಡಿದವರು ಸದರಿ ಕಾಯ್ದೆಯ ಕಲಂ 13(4) ಹಾಗೂ ನಿಯಮ 8 ರಡಿಯಲ್ಲಿ ಪ್ರದತ್ತ ಅಧಿಕಾರದನ್ವಯ ಈ ಮೇಲೆ ವಿವರಿಸಿದ ಸ್ಥಿರಾಸ್ತಿಯ ಸ್ವಾಧೀನತೆಯನ್ನು ದಿನಾಂಕ : 15.12.2021 ರಂದು ಪಡೆದುಕೊಂಡಿರುತ್ತಾರೆ. ಸಾಲಗಾರರು ಸಾರ್ವಜನಿಕರಿಗೆ ಈ ಆಸ್ತಿಯೊಂದಿಗೆ ವ್ಯವಹರಿಸದಂತೆ ಎಚ್ಚರಿಸುತ್ತಿದ್ದೇನೆ ಹಾಗೂ ಒಂದು ವೇಳೆ ವ್ಯವಹರಿಸಿದ್ದೇ ಆದರೆ ಅಂತಹ ಯಾವುದೇ ವ್ಯವಹಾರಗಳು ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ಶಾಖೆಗೆ ಸಂದಾಯವಾಗುವ ಮೊಬಲಗು ರೂ. 17,32,528.00 ಮತ್ತು ಬಡ್ಡಿ ಇವುಗಳಿಗೆ ಋಣಭಾರವಾಗಿರುತ್ತದೆ.

ಭದ್ರತಾ ಸ್ವತ್ತುಗಳ ಮರುಗಳಿಕೆಗಾಗಿ ಸಮಯ ಲಭ್ಯತೆ ಸಂಬಂಧವಾಗಿ ಕಾಯಿದೆಯ ಪ್ರಕರಣ 13ರ ಉಪ ಪ್ರಕರಣ 8)ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ. ಸರ್ಫೇಸಿ ಕಾಯ್ದೆ ಅಡಿ ಬೇಡಿಕೆ ನೋಟಿಸನ್ನು ನೀಡಿದ ನಂತರ ಯಾವುದೇ ಮೊತ್ತವನ್ನು ಪಾವತಿಸಿದಲ್ಲಿ ಅದನ್ನು ರಿಯಲೈಜೇಶನ್/ಇತ್ಯರ್ಥದ ಸಮಯದಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದು.


ಆಸ್ತಿಯ ಮಾಲೀಕರ ಹೆಸರು : ಶ್ರೀ ವಾಗೀಶ್ ಟಿ.ಎಂ. ಮತ್ತು ಸಹ-ಸಾಲಗಾರರಾದ : ಶ್ರೀಮತಿ ವಾಣಿ ವಾಗೀಶ್ ಟಿ.ಎಂ.

ಸ್ಥಿರಾಸ್ತಿ ವಿವರ : ದಾವಣಗೆರೆ-577 001, ಎಸ್.ಎಸ್. ಲೇಔಟ್, ಸಿಎಂಸಿ ಪಾರ್ಕ್ ಹತ್ತಿರ, ಶಾಮೂರು ಡಿವಿಜನ್, ಸಿಎಂಸಿ ವಾರ್ಡ್ ನಂ. 30, ಸರ್ವೆ ನಂ. 78/1 ಇಪಿ, ಡೋರ್ ನಂ. 1876/ಬಿ, 2ನೇ ಕ್ರಾಸ್, ಸೈಟ್ ನಂ. 3 ರಲ್ಲಿರುವ ಆಸ್ತಿ, ಎಕ್ಸ್‌ಟೆಂಟ್ : 1254 ಚ.ಅಡಿ. ಮತ್ತು ಇದರ ಚಕ್ಕುಬಂದಿ ; ಉತ್ತರ : ಡೋರ್ ನಂ. 1876/ಎ ರಲ್ಲಿರುವ ಆಸ್ತಿ, ದಕ್ಷಿಣ : ಡೋರ್ ನಂ. 4427 ರಲ್ಲಿರುವ ಆಸ್ತಿ, ಪೂರ್ವ : ರಸ್ತೆ, ಪಶ್ಚಿಮ : ರಸ್ತೆ,

**ದಾವಣಗೆರೆ : 15.12.2021** — **ಸಹಿ/- ಅಧಿಕೃತ ಅಧಿಕಾರಿ**

**ಸ್ಥಳ : ದಾವಣಗೆರೆ.** — **ಬ್ಯಾಂಕ್ ಆಫ್ ಇಂಡಿಯಾ**


# ಎಂ.ಇ.ಎಸ್. ನಿಷೇಧಕ್ಕೆ ಪ್ರವೀಣ್ ಶೆಟ್ಟಿ ಒತ್ತಾಯ



ಹರಿಹರ, ಡಿ.20- ಬೆಳಗಾವಿಯ ಎಂ.ಇ.ಎಸ್. ಪುಂಡರು ಗೂಂಡಾಗಳ ರೀತಿಯಲ್ಲಿ ಕೃತ್ಯಗಳನ್ನು ಮಾಡಿ, ಕನ್ನಡಿಗರ ಮತ್ತು ಮರಾಠಿಗರ ನಡುವೆ ದ್ವೇಷ ಹುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಸಂಘಟನೆಯನ್ನು ನಿಷೇಧ ಮಾಡಬೇಕು ಎಂದು ಕನ್ನಡ ರಕ್ಷಣಾ ವೇದಿಕೆಯ ರಾಜ್ಯ ಅಧ್ಯಕ್ಷ ಪ್ರವೀಣ್ ಶೆಟ್ಟಿ ಒತ್ತಾಯಿಸಿದ್ದಾರೆ.

ಬೆಳಗಾವಿಗೆ ಹೋಗುತ್ತಿರುವ ವೇಳೆ ನಗರದ ಗಾಂಧಿ ವೃತ್ತದಲ್ಲಿ ನಗರದ ರಕ್ಷಣಾ ವೇದಿಕೆ ವತಿಯಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ಧ್ವಂಸ ಮಾಡಿ, ಕನ್ನಡದ ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲು ಹೊಡೆಯುವ ಮೂಲಕ ಕನ್ನಡಿಗರ ಮೇಲೆ ದಾಳಿ ಮಾಡುತ್ತಿರುವುದು ಖಂಡನಿಯ. ಕನ್ನಡಿಗರು ಮತ್ತು ಮರಾಠಿಗರಲ್ಲಿ ಒಳ್ಳೆಯ ಬಾಂಧವ್ಯ ಇದೆ. ಆದರೆ, ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿ ಉದ್ಧವ್ ಠಾಕ್ರೆಯವರು ಬೆಂಕಿ ಹಚ್ಚುವ ಕಾರ್ಯಕ್ಕೆ ಮುಂದಾಗಿದ್ದಾರೆ ಎಂದವರು ದೂರಿದರು.

**ಹರಿಹರ**

ಡಿ.ಕೆ ಶಿವಕುಮಾರ್, ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸಂಸದರು ಸೋನಿಯಾ ಗಾಂಧಿಯವರ ಬಳಿ ಮಾತನಾಡಿ, ಮಹಾರಾಷ್ಟ್ರ ಸರ್ಕಾರಕ್ಕೆ ನೀಡಿ ರುವ ಕಾಂಗ್ರೆಸ್ ಬೆಂಬಲವನ್ನು ವಾಪಾಸ್ ಪಡೆಯುವಂತೆ ಹೇಳಬೇಕು ಎಂದೂ ಅವರು ಒತ್ತಾಯಿಸಿದರು.

ನಾವು ಶಿವಾಜಿ ವಿರೋಧಿಗಳಲ್ಲ. ಆದರೆ, ಶಿವಾಜಿ ಮುಂದೆ ಇಟ್ಟುಕೊಂಡು ಎಂಇಎಸ್ ಕನ್ನಡಿಗರ ಮೇಲೆ ಸವಾರಿ ಮಾಡುವುದಕ್ಕೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಬೆಳಗಾವಿ ನಗರದಲ್ಲಿ ಕನ್ನಡಿಗರ ಮೇಲೆ ದಿನನಿತ್ಯ ದಬ್ಬಾಳಿಕೆ ನಡೆಯುತ್ತದೆ. ಇದಕ್ಕೆ ಸರ್ಕಾರ ಶಾಶ್ವತ ಕಡಿವಾಣ ಹಾಕಬೇಕು ಎಂದವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ನಾಗರಾಜ್ ಜಮ್ಮನಳ್ಳಿ, ತಾಲ್ಲೂಕು ಅಧ್ಯಕ್ಷ ರಮೇಶ್ ಮಾನೆ, ಕಾರ್ಯಾಧ್ಯಕ್ಷ ಪ್ರೀತಂಬಾಬು, ಗೌರವ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್, ಯಮನೂರು ಮತ್ತಿತರರು ಉಪಸ್ಥಿತರಿದ್ದರು.


## ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಹರಿಹರ-577 601.

## 2020-2021 ನೇ ಸಾಲಿನ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

**ಈ ಬ್ಯಾಂಕಿನ 2020-2021 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 23-12-2021 ನೇ ಗುರುವಾರ ಬೆಳಿಗ್ಗೆ 11-30 ಗಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಅಂಜಿನಮ್ಮನವರು ಇವರ ಘನ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಮುಂದೆ ಇರುವ ಶ್ರೀಮತಿ ಕೆಂಚಮ್ಮ ಹೆಚ್.ಕೆ. ವೀರಪ್ಪ ಸಮುದಾಯ ಭವನದಲ್ಲಿ ಕರೆಯಲಾಗಿದೆ. ಬ್ಯಾಂಕಿನ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಕೋರಿದೆ.**

**ಕಾರ್ಯಕ್ರಮಗಳು :**

- ದೇವತಾ ಪ್ರಾರ್ಥನೆ. ✧ ಸ್ವಾಗತ ಭಾಷಣ
- 2020-21 ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಓದಿ ದಾಖಲು ಮಾಡುವುದು.
- ದಿನಾಂಕ : 23.12.2020 ರಂದು ನಡೆದ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
- 2020-2021ನೇ ಸಾಲಿನ ಆಡಳಿತ ವರದಿ ಅಂಗೀಕರಿಸುವುದು.
- ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ 2020-21ನೇ ಸಾಲಿನ ಜಮಾ-ಖರ್ಚು, ಲಾಭ-ನಷ್ಟ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಅಂಗೀಕರಿಸುವುದು.
- 2020-2021ನೇ ಸಾಲಿಗೆ ಮಂಜೂರಾದ ಆಯ-ವ್ಯಯದ ಹೆಚ್ಚುವರಿ ಖರ್ಚಿಗೆ ಅನುಮೋದನೆ ಪಡೆಯುವುದು.
- 2021-2022ನೇ ಸಾಲಿಗೆ ಅಂದಾಜು ಬಡ್ಜೆಟ್ ಮಂಜೂರು ಮಾಡಿ ಅನುಮೋದನೆ ನೀಡುವುದು.
- 2021-2022ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು ಹಾಗೂ ಸಂಭಾವನೆ ನಿಗಧಿಗೊಳಿಸುವುದು.
- 2020-2021ನೇ ಸಾಲಿಗೆ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗೆ ಅನುಪಾಲನಾ ವರದಿ ತಯಾರಿಸಿರುವುದನ್ನು ಅಂಗೀಕರಿಸುವುದು.
- ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು ✧ ಅಧ್ಯಕ್ಷರ ಭಾಷಣ ✧ ವಂದನಾರ್ಪಣೆ.

**ಈಗಾಗಲೇ ಸರ್ವಸದಸ್ಯರ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು. ಈವರೆಗೂ ತಲುಪದಿದ್ದಲ್ಲಿ ಈ ಪತ್ರಿಕೆಯನ್ನು ಆಹ್ವಾನವೆಂದು ಪರಿಗಣಿಸಿ ಸಭೆಗೆ ಹಾಜರಾಗಲು ಕೋರಿದೆ. ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಬೇಕಾಗಿ ವಿನಂತಿ.**

| ಆಡಳಿತ ಮಂಡಳಿಯ ಪರವಾಗಿ | ಶ್ರೀಮತಿ ಅಂಜಿನಮ್ಮ | ಶ್ರೀಮತಿ ಓ.ಎನ್. ನಿರ್ಮಲ |
|---|---|---|
| ಸ್ಥಳ: ಹರಿಹರ, ದಿನಾಂಕ: 02-12-2021 | ಅಧ್ಯಕ್ಷರು | ವ್ಯವಸ್ಥಾಪಕರು |

# ದಾವಣಗೆರೆ ಕ್ಲಬ್ ಏಳಿಗೆಗೆ ಶ್ರಮಿಸೋಣ

## ಕ್ಲಬ್‌ನ ವಾರ್ಷಿಕ ಮಹಾಸಭೆಯಲ್ಲಿ ಎ.ಬಿ. ಚಂದ್ರಶೇಖರ್



ದಾವಣಗೆರೆ, ಡಿ.20- ನಗರದ ಪ್ರವಾಸಿ ಮಂದಿರ ಬಳಿ ಇರುವ ದಾವಣಗೆರೆ ಕ್ಲಬ್ ನ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯು ಕ್ಲಬ್ ನ ಆವರಣದಲ್ಲಿ ನಿನ್ನೆ ನಡೆಯಿತು.

ಕ್ಲಬ್ ನ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷ ಎ.ಬಿ. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿ ಸಭೆ ಯಶಸ್ವಿಯಾಗಿ ನೆರವೇರಿಸಿದರು.

ಕ್ಲಬ್ ಅಭಿವೃದ್ಧಿಗಾಗಿ ಕಾರ್ಯಕಾರಿ ಸಮಿತಿ ಉತ್ತಮ ಕಾರ್ಯ ಮಾಡುತ್ತಿದ್ದು, ಮುಂದೆಯೂ ಸಹ ಹೀಗೆಯೇ ಕಾರ್ಯಗಳ ಮುಖೇನ ಕ್ಲಬ್ ಏಳಿಗೆಗೆ ಒಗ್ಗಟ್ಟಿನಿಂದ ಶ್ರಮಿಸೋಣ ಎಂದು ಕ್ಲಬ್ ಸದಸ್ಯರು ಸಲಹೆಯೊಂದಿಗೆ ಪ್ರೋತ್ಸಾಹ ನೀಡಿದರು.

ಸಭೆಯಲ್ಲಿ ಗೌರವ ಕಾರ್ಯದರ್ಶಿ ಪಲ್ಲಾಗಟ್ಟಿ ರವಿಶಂಕರ್, ಸಹ ಕಾರ್ಯದರ್ಶಿ ಎಸ್.ಜಿ. ಉಳುವಯ್ಯ, ಖಜಾಂಚಿ ವಾಲಿ ಲಿಂಗರಾಜ್, ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ್, ಹೆಚ್.ವಿ. ರುದ್ರೇಶ್, ಬೇತೂರು ಅಭಿಷೇಕ್, ಎಸ್.ಕೆ. ತಿಮ್ಮರಾಜ್ ಗುಪ್ತಾ, ಬಾದಾಮಿ ಮಲ್ಲಿಕಾರ್ಜುನ್, ಎಸ್.ಕೆ. ಪ್ರಶಾಂತ್ ಗುಪ್ತಾ, ಹಿರಿಯ ಸದಸ್ಯರುಗಳಾದ ಆನಗೋಡು ನಂಜುಂಡಪ್ಪ, ಎಸ್.ಕೆ. ವೀರಣ್ಣ, ಬಿ. ಹೆಚ್. ಪರಶುರಾಮಪ್ಪ, ಪರಮೇಶ್ವರ ಗೌಡ್ರು, ಬಾದಾಮಿ ಕರಿಬಸಪ್ಪ, ಮಲ್ಲಿನಾಥ್ ಪುರಾಣಿಕ್, ಕೆ.ಬಿ. ನಾಗರಾಜ್ ಸೇರಿದಂತೆ ಕ್ಲಬ್ ನ ಸದಸ್ಯರುಗಳು ಭಾಗವಹಿಸಿದ್ದರು.

# ಪರಿಸರ ರಕ್ಷಣೆಯಿಂದ ಗ್ರಾಮಗಳ ಉದ್ಧಾರ ಸಾಧ್ಯ

## ಕೋಲ್ಕುಂಟೆ ಗ್ರಾಮದ ಕೆರೆ ಹಸ್ತಾಂತರ ಕಾರ್ಯಕ್ರಮದಲ್ಲಿ ನಟ ಶರತ್ ಲೋಹಿತಾಶ್ವ

ದಾವಣಗೆರೆ, ಡಿ. 20 - ಗ್ರಾಮಗಳ ಉದ್ಧಾರವಾಗಬೇಕು. ಮಹಿಳೆಯರು ಸುರಕ್ಷಿತವಾಗಿ ಬಾಳುವ ಪರಿಸರ ನಿರ್ಮಾಣವಾಗಬೇಕು. ಆಗ ದೇಶ ಅಭಿವೃದ್ಧಿಯಾಗುತ್ತದೆ ಎಂದು ನಟ ಶರತ್ ಲೋಹಿತಾಶ್ವ ಹೇಳಿದರು.

ಕೋಲ್ಕುಂಟೆ ಗ್ರಾಮಾಭ್ಯುದ್ಯಯ ಸಂಘ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಹಯೋಗದಲ್ಲಿ ತಾಲ್ಲೂಕಿನ ಕೋಲ್ಕುಂಟೆ ಗ್ರಾಮದಲ್ಲಿ ಭಾನುವಾರ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ಪುನಶ್ಚೇತನಗೊಳಿಸಲಾದ ಕೆರೆ ಹಸ್ತಾಂತರ ಹಾಗೂ ವಿವಿಧೋದ್ದೇಶ ಸಮುಚ್ಛಯ ನಿರ್ಮಾಣದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಅಧ್ಯಕ್ಷತೆ ವಹಿಸಿದ್ದ ಕೋಲ್ಕುಂಟೆ ಗ್ರಾಮಾಭ್ಯುದ್ಯಯ ಸಂಘದ ಗೌರವಾಧ್ಯಕ್ಷ



ಸುಚೇಂದ್ರ ಪ್ರಸಾದ್, ನನ್ನ ತಾಯಿ ಹಾಗೂ ತಾತನ ಊರಾದ ಕೋಲ್ಕುಂಟೆಯನ್ನು ಮಾದರಿ ಗ್ರಾಮವನ್ನಾಗಿ ಮಾಡುವ ದೃಢ ಸಂಕಲ್ಪ ಹೊಂದಿದ್ದು, ಸಮಸ್ತ ಗ್ರಾಮಸ್ಥರು ಗ್ರಾಮದ ಅಭಿವೃದ್ಧಿಗೆ ಕೈಜೋಡಿಸುವ ಮೂಲಕ ಇಚ್ಛಾ ಶಕ್ತಿ ಪ್ರದರ್ಶಿಸಬೇಕು ಎಂದು ಕೋರಿದರು.

ತಹಶೀಲ್ದಾರ್ ಬಿ.ಎನ್.ಗಿರೀಶ್, ದಾವಣಗೆರೆ ತಾಲ್ಲೂಕಿನಲ್ಲಿ ಒಟ್ಟು 53 ಕೆರೆಗಳಿದ್ದು, ಎಲ್ಲ ಕೆರೆಗಳನ್ನು ಇದೇ ಮೊದಲ ಬಾರಿಗೆ ಸಮೀಕ್ಷೆ ಮಾಡಿಸಲಾಗಿದ್ದು, ಇದರಲ್ಲಿ 17 ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ನಿರ್ದೇಶಕ ಜಯಂತ್ ಪೂಜಾರಿ, ಮಾಜಿ ಶಾಸಕ ಬಸವರಾಜನಾಯ್ಕ, ಬಹುಭಾಷಾ ಚಿತ್ರ ನಿರ್ಮಾತೃ ರಾಜಶೇಖರ್, ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎನ್.ಇ. ಜೀವನಮೂರ್ತಿ, ಆರ್.ಆರ್. ರಮೇಶ್‌ಬಾಬು ಮಾತನಾಡಿದರು.

ಬಿಜೆಪಿ ಮಂಡಲ ಅಧ್ಯಕ್ಷ ದೇವೇಂದ್ರಪ್ಪ ಶ್ಯಾಗಲೆ, ಕುರ್ಕಿ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಚ್. ಕೊಟ್ರಪ್ಪ, ಕೈದಾಳೆ ಗ್ರಾಮ ಪಂಚಾಯಿತಿ ಪಿಡಿಒ ವಿದ್ಯಾವತಿ, ಹದಡಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಜೆ.ಸಿ.ನಿಂಗಣ್ಣ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯೆ ಮೀನಾ ಶ್ರೀನಿವಾಸ್, ಮಾನವ ಕಂಪ್ಯೂಟರ್ ಬಸವರಾಜ್ ಉಮ್ರಾಣಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಆಶಾ ಬಸವರಾಜ್, ಕೋಲ್ಕುಂಟೆ ಗಾಮಾಭ್ಯುದ್ಯಯ ಸಂಘದ ಅಧ್ಯಕ್ಷ ಕೆ.ಜಿ. ಮಂಜುನಾಥ್, ರಂಗಕರ್ಮಿ ಬಾ.ಮ. ಬಸವರಾಜಯ್ಯ ಉಪಸ್ಥಿತರಿದ್ದರು.

ಎಸ್. ಲೋಕೇಶಪ್ಪ ಸ್ವಾಗತಿಸಿದರು. ಶಿಕ್ಷಕ ವೀರೇಶ್ ನಿರೂಪಿಸಿದರು.

# ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಜನ್ಮದಿನ ನಾಡಿದ್ದು ರಕ್ತದಾನ ಶಿಬಿರ



ದಾವಣಗೆರೆ, ಡಿ.20- ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳವರ ಜನ್ಮ ದಿನದ ಅಂಗವಾಗಿ ಇದೇ ದಿನಾಂಕ 23 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ಬೆಳಗಾವಿ ಗಾಂಧಿ ಭವನದಲ್ಲಿ ಸ್ವಾಮೀಜಿಯವರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡುವ ಮೂಲಕ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ.

ಅಂದು ಬೆಳಿಗ್ಗೆ 10.30 ಕ್ಕೆ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಠದಲ್ಲಿ ಕೂಡ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಜ್ಯ ಯುವ ಘಟಕದ ಅಧ್ಯಕ್ಷ ಬಿ.ಜೆ. ಅಜಯ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆಯಲ್ಲಿ ನಡೆಯುವ ರಕ್ತದಾನ ಶಿಬಿರದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸೇರಿದಂತೆ ಅನೇಕ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ಲಿಂಗಾಯತ ಪಂಚಮಸಾಲಿ ಮಹಾಸಭಾ ವತಿಯಿಂದ ರಾಜ್ಯಾದ್ಯಂತ ರಕ್ತದಾನ ಶಿಬಿರ ಆಯೋಜಿಸಲಾಗಿದ್ದು, ಐದು ಸಾವಿರ ಯೂನಿಟ್‌ಗಿಂತ ಅಧಿಕ ರಕ್ತದಾನ ಮಾಡುವ ಗುರಿ ಹೊಂದಲಾಗಿದೆ ಎಂದು ಅವರು ಹೇಳಿದರು.

ಪಂಚಮಸಾಲಿ ಸಮುದಾಯದ 2 ಎ ಮೀಸಲಾತಿ ಹೋರಾಟದ ಸಂದರ್ಭದಲ್ಲಿ ಹೇಳಿದ 'ರಕ್ತ ಕೊಟ್ಟೇವು, ಮೀಸಲಾತಿ ಬಿಡೆವು' ಎಂಬ ಘೋಷಣೆಯಂತೆ ಈ ಬಾರಿ ಶ್ರೀ ಜಯಮೃತ್ಯುಂಜಯ ಸ್ವಾಮೀಜಿಯವರ 42 ನೇ ಹುಟ್ಟುಹಬ್ಬದ ಅಂಗವಾಗಿ ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ರಕ್ತ ದಾಸೋಹ ಕಾರ್ಯಕ್ರಮದ ಮೂಲಕ ಮೀಸಲಾತಿ ಹೋರಾಟವನ್ನು ಮುನ್ನೆಲೆಗೆ ತಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಪಂಚಮಸಾಲಿ ಸಮಾಜದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ 2 ಎ ಮೀಸಲಾತಿ ಹೋರಾಟಕ್ಕೆ ಬಲ ನೀಡುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಅಶೋಕ್ ಗೋಪನಾಳ್, ಮಹಾಂತೇಶ್ ಒಣರೊಟ್ಟಿ, ಮೋತಿ ಟಿ. ಶಂಕರಪ್ಪ, ಕಂಚಿಕೆರೆ ಕೊಟ್ರೇಶ್, ಬಾದಾಮಿ ಮಲ್ಲಿಕಾರ್ಜುನ್, ಕೊಳೇನಹಳ್ಳಿ ನಾಗರಾಜ್, ಜಯಪ್ರಕಾಶ್, ದೇವರಬೆಳಕೆರೆ ಗಣೇಶ್, ಸೋಗಿ ಶಾಂತಕುಮಾರ್, ವಾಣಿ ನಾಗಭೂಷಣ್, ನಾಗೇಂದ್ರಪ್ಪ ಮತ್ತಿತರರಿದ್ದರು.



# ರಾಣೇಬೆನ್ನೂರಿನಲ್ಲಿ ಇಂದು ತುಕ್ಕಾಭವಾನಿ ಕಾರ್ತಿಕ

ದೊಡ್ಡಪೇಟೆ ಶ್ರೀ ತುಕ್ಕಾಭವಾನಿ ದೇವಿ ಕಾರ್ತಿಕೋತ್ಸವವು ಇಂದು ಸಂಜೆ ನಡೆಯಲಿದೆ ಎಂದು ಅಧ್ಯಕ್ಷ ಶಿವಮೂರ್ತಿ ದಿಲ್ಲಿವಾಲಾ ತಿಳಿಸಿದ್ದಾರೆ.

# ವಿಶ್ವೇಶ್ವರಾಯ ಇಂಜಿನಿಯರಿಂಗ್ ಕಾಲೇಜು ವಿವಿಯನ್ನು ಉನ್ನತೀಕರಣ ಸೇರಿದಂತೆ, 4 ಮಸೀದಿಗಳಿಗೆ ಅಂಗೀಕಾರ

ಬೆಳಗಾವಿ, ಡಿ. 20 – ವಿಶ್ವೇಶ್ವರಾಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾನಿಲಯವನ್ನು (ಯು.ವಿ.ಸಿ.ಇ.) ಐ.ಐ.ಟಿ. ರೀತಿ ಉನ್ನತೀಕರಿಸುವ ಮಸೂದೆ ಸೇರಿದಂತೆ ನಾಲ್ಕು ಮಸೂದೆಗಳಿಗೆ ರಾಜ್ಯ ವಿಧಾನಸಭೆ ಸೋಮವಾರ ಒಪ್ಪಿಗೆ ನೀಡಿದೆ.

1917ರಲ್ಲಿ ಸರ್ ಎಂ. ವಿಶ್ವೇಶ್ವರಾಯ ಸ್ಥಾಪಿಸಿದ್ದ ಯು.ವಿ.ಸಿ.ಇ., ಪ್ರಸಕ್ತ ಬೆಂಗಳೂರು ವಿಶ್ವವಿದ್ಯಾನಿಲಯದ ಭಾಗವಾಗಿದೆ.

ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ ಅವರು ಈ ಕುರಿತ ಮಸೂದೆಯನ್ನು ಮಂಡಿಸಿದರು.

ಮಸೂದೆಯ ಅನ್ವಯ ಜೆ.ಇ.ಇ. ಮೂಲಕ ಶೇ.25ರಷ್ಟು ಸ್ಥಾನಗಳಿಗೆ ಪ್ರವೇಶ ನೀಡಲಾಗುವುದು. ದೇಶಾದ್ಯಂತದ ಪ್ರತಿಭೆಗಳಿಗೆ ಬೆಂಗಳೂರಿನಲ್ಲಿ ಅವಕಾಶ ನೀಡಲಾಗುವುದು ಎಂದರು.

ಇದಕ್ಕೆ ಆಕ್ಷೇಪಿಸಿದ ಶಾಸಕರಾದ ಶರತ್ ಬಚ್ಚೇಗೌಡ ಹಾಗೂ ಪ್ರಿಯಾಂಕ್ ಖರ್ಗೆ, ಈ ಸಂಸ್ಥೆಗೆ ಕೇಂದ್ರ ಸರ್ಕಾರ ಅನುದಾನ ನೀಡಿಲ್ಲ. ಎಲ್ಲಾ ಸೀಟುಗಳನ್ನು ಸಿ.ಇ.ಟಿ. ಮೂಲಕ ಸ್ಥಳೀಯರಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಅಶ್ವತ್ಥ ನಾರಾಯಣ ಆರಂಭದಲ್ಲಿ ಈ ಬಗ್ಗೆ ಬದಲಾವಣೆ ತರುವುದಾಗಿ ಹೇಳಿದರು. ಆದರೆ, ಅಂತಿಮವಾಗಿ ಯಥಾಸ್ಥಿತಿಯಲ್ಲಿ ಮಸೂದೆಯನ್ನು ಉಳಿಸಿಕೊಳ್ಳಲಾಯಿತು. ಮುಂದಿನ ದಿನಗಳಲ್ಲಿ ಸರ್ಕಾರ ಅಗತ್ಯ ಬದಲಾವಣೆ ತರಲಿದೆ ಎಂದವರು ಹೇಳಿದರು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ ತಿದ್ದುಪಡಿ, ಕರ್ನಾಟಕ ಇನಾಮು ರದ್ದತಿ ಕಾಯ್ದೆಗೆ ತಿದ್ದುಪಡಿ ಹಾಗೂ ರಾಜ್ಯ ಜಮೀನು ಕಂದಾಯ ತಿದ್ದುಪಡಿ ಮಸೂದೆಗಳಿಗೂ ಸದನ ಒಪ್ಪಿಗೆ ನೀಡಿತು.

# ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಇಂದಿನ ಪ್ರವಾಸ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ಹಾಗೂ ಆಯೋಗದ ಸದಸ್ಯರುಗಳು ಮೂರು ದಿನಗಳ ಕಾಲ ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಹರಿಹರ ತಾಲ್ಲೂಕಿನ ಬನ್ನಿಕೋಡು ಮತ್ತು ದಿಟ್ಟೂರು ಗ್ರಾಮದಲ್ಲಿ ವಾಸವಿರುವ ಪಂಚಮಸಾಲಿ ಸಮುದಾಯದವರ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿ ಕುರಿತಂತೆ ಹೆಗಡೆ ಅವರು ಇಂದು ಪರಿಶೀಲನೆ ನಡೆಸುವರು.

ನಾಳೆ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಜೊತೆ ದೇವರ ಬೆಳಕೆರೆ, ಗುಡ್ಡದಹಳ್ಳಿ, ಹೊಳೆಸಿರಿಗೆರೆ ಗ್ರಾಮಗಳಲ್ಲಿ ವಾಸವಿರುವ ಪಂಚಮಸಾಲಿ ಸಮುದಾಯದವರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಣೆ ಮತ್ತು ಸಮಾಲೋಚನೆ ನಡೆಸುವರು.

# ದುಮ್ಮಿಗೊಲ್ಲರಹಟ್ಟಿಯಲ್ಲಿ ಇಂದು ಜುಂಜಪ್ಪ ಸ್ವಾಮಿ ಜಾತ್ರಾ ಮಹೋತ್ಸವ

ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಹೋಬಳಿ ದುಮ್ಮಿಗೊಲ್ಲರಹಟ್ಟಿ ಗ್ರಾಮದ ಐತಿಹಾಸಿಕ ಪರಂಪರೆಯ ಶ್ರೀ ಜುಂಜಪ್ಪ ಸ್ವಾಮಿ ಮಹಾಜಾತ್ರೆಯು ಇಂದು ನಡೆಯಲಿದೆ.

ಈ ಸಂದರ್ಭದಲ್ಲಿ ಮುತ್ತಿನ ಪಲ್ಲಕಿ ಉತ್ಸವ, ಕದಳಿ ಪೂಜೆ, ಎಲೆ ಪೂಜೆ, ಉಗ್ಗದ ಗಡಿಗೆ, ಹಾಲುಕಂಬಿಗೆ, ಹರಗಿನ ಮುದ್ರೆಗೆ, ಕಂಚಿನ ಕಡಗಕ್ಕೆ ವಿಶೇಷ ಪೂಜೆಗಳು ನಡೆಯಲಿವೆ. ಹಾವು, ಚೇಳು ಕಡಿದವರು ಮುಡುಪು ಕಟ್ಟಿಕೊಂಡು ಬಂದು ಕರಿಕಂಬಳಿ ಗದ್ದಿಗೆ ಮೇಲೆ ಹಾಕುವುದು ಇಲ್ಲಿನ ವಿಶೇಷ ಸಂಪ್ರದಾಯವಾಗಿದೆ ಎಂದು ಗ್ರಾಮದ ಇ.ಎ.ಚಿತ್ತಪ್ಪ, ಗೌಡ್ರ ಕುಬೇಂದ್ರಪ್ಪ, ಗೌಡ್ರ ಗಿರಿಯಪ್ಪ, ಅಂಗಡಿ ತಿಮ್ಮಪ್ಪ, ರವಿಸುದೇರ್, ನಾಗಪ್ಪ, ರೇವಣಸಿದ್ದಪ್ಪ, ಗೋವಿಂದಪ್ಪ, ತಿಮ್ಮಣ್ಣ, ಗುರುಸಿದ್ದಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಬಸವೇಶ್ವರ, ಗಾಳಿ ದುರ್ಗಮ್ಮ ದೇವಿ ಕಾರ್ತಿಕ



ಕೆ.ಆರ್. ರಸ್ತೆಯ ವೆಂಕಭೋವಿ ಕಾಲೋನಿಯಲ್ಲಿ ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಗಾಳಿ ದುರ್ಗಮ್ಮ ದೇವಿಯ ಕಡೇ ಕಾರ್ತಿಕೋತ್ಸವವು ಇಂದು ಸಂಜೆ 7.30 ಕ್ಕೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿಯ ಡಿ. ಶಿವಕುಮಾರ್ ತಿಳಿಸಿದ್ದಾರೆ.

# ಭಾರತ ವಿಕಾಸ ಪರಿಷತ್‌ನಿಂದ ಲಿಖಿತ ರಸಪ್ರಶ್ನೆ ಸ್ಪರ್ಧೆ

ದಾವಣಗೆರೆ,ಡಿ.20- ನಗರದ ಭಾರತ ವಿಕಾಸ ಪರಿಷತ್ ವತಿಯಿಂದ 6 ರಿಂದ 8ನೇ ತರಗತಿ ಮತ್ತು 9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಜ್ಯೂನಿಯರ್ ಮತ್ತು ಸೀನಿಯರ್ ಎರಡು ಗ್ರೂಪ್ ನಲ್ಲಿ ಲಿಖಿತ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿರುವುದರಿಂದ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.

ಇದೇ ದಿನಾಂಕ 26ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ರಸಪ್ರಶ್ನೆ ಸ್ಪರ್ಧೆಗಳು ನಿಟುವಳ್ಳಿಯ ಸೋಮೇಶ್ವರ ವಿದ್ಯಾಲಯದಲ್ಲಿ ಜರುಗಲಿವೆ. ಪ್ರಥಮ ಬಹುಮಾನ ರೂ.1500/- ದ್ವಿತೀಯ ರೂ.1000/- ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು. ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ ಮೂಡಿಸುವ ಉದ್ದೇಶದಿಂದ ಈ ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಪರಷತ್ ನ ಸಹ ಸಂಚಾಲಕರಾದ ಡಾ|| ಆರತಿ ಸುಂದರೇಶ್ ತಿಳಿಸಿದ್ದಾರೆ.

# ದೊಡ್ಡಬಾತಿ ಗ್ರಾಮದಲ್ಲಿ ಸಂಭ್ರಮದ ಕಾರ್ತಿಕೋತ್ಸವ



ದಾವಣಗೆರೆ, ಡಿ.20- ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಸೋಮವಾರ ರಾತ್ರಿ 10.30 ಗಂಟೆಗೆ ದೀಪೋತ್ಸವದ ಮೂಲಕ ಗ್ರಾಮಸ್ಥರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

# ಹರಪನಹಳ್ಳಿಗೆ ನಾಳೆ ರಾಜನಹಳ್ಳಿ ಶ್ರೀ



ಹರಪನಹಳ್ಳಿ,ಡಿ.20- ಪಟ್ಟಣದ ಅರಸಿಕೇರಿ ರಸ್ತೆಯ ಬಳಿ ಇರುವ ವಾಲ್ಮೀಕಿ ಸಮು ದಾಯ ಭವನದಲ್ಲಿ ನಾಡಿದ್ದು ದಿನಾಂಕ 22 ನೇ ಬುಧವಾರ ಬೆಳಿಗ್ಗೆ 9 ಗಂಟೆಗೆ ರಾಜನ ಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಪೂರ್ವಭಾವಿ ಸಭೆ ಜರುಗಲಿದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ತಿಳಿಸಿದ್ದಾರೆ. ಮುಂಬರುವ 2022ನೇ ಫೆಬ್ರವರಿ 8 ಮತ್ತು 9 ನೇ ತಾರೀಖಿನಂದು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಜರುಗಲಿರುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ಪೂರ್ವಭಾವಿ ಸಭೆ ಜರುಗಲಿದೆ ಎಂದು ಅವರು ತಿಳಿಸಿದ್ದಾರೆ.

# ಬ್ರಾಹ್ಮಣ ಸಮಾಜದಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.20- ಬ್ರಾಹ್ಮಣ ಸಮಾಜ ಸೇವಾ ಸಂಘದಡಿ ದಾನಿಗಳಿಂದ ಸ್ಥಾಪಿಸಿರುವ ದತ್ತಿ ನಿಧಿಯಿಂದ ಆರ್ಥಿಕವಾಗಿ ಹಿಂದುಳಿದ ಹಾಗೂ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿರುವ ತ್ರಿಮತಸ್ಥ ಬ್ರಾಹ್ಮಣ ಸಮಾಜದ ಸದಸ್ಯರ ಮಕ್ಕಳಿಗೆ ಅವರ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ನೀಡಲಾಗುವುದು.

ಪಿಯುಸಿ ಹಾಗೂ ಡಿಗ್ರಿ ಮಟ್ಟದ ವ್ಯಾಸಂಗ ಮಾಡುತ್ತಿದ್ದು ಅವರ ಆರ್ಥಿಕ ಪರಿಸ್ಥಿತಿ ಹಾಗೂ ಶೈಕ್ಷಣಿಕ ಪ್ರಗತಿಯ ಬಗ್ಗೆ ಸೂಕ್ತ ದಾಖಲೆ ಒದಗಿಸಬೇಕು. ಅರ್ಜಿಗಳು ಬ್ರಾಹ್ಮಣ ಸಮಾಜ ಸೇವಾ ಸಂಘದ ಕಾರ್ಯಾಲಯದಲ್ಲಿ ಲಭ್ಯವಿದ್ದು, ಪೂರ್ಣಗೊಳಿಸಿದ ಅರ್ಜಿಗಳನ್ನು ಇದೇ ದಿನಾಂಕ 25 ರೊಳಗಾಗಿ ಸಲ್ಲಿಸತಕ್ಕದ್ದು. ವಿವರಕ್ಕೆ ಸಂಪರ್ಕಿಸಿ : 96209 00275, 944480 13144.


# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆ, 7ನೇ ಅಡ್ಡರಸ್ತೆಯಿಂದ 9ನೇ ಅಡ್ಡರಸ್ತೆವರೆಗೆ, ಶಾಮನೂರು ರಸ್ತೆ, ಗ್ರೀನ್ ಪಾರ್ಕ್, 100 ಫೈಪರ್ಸ್,ಮತ್ತು ಜಾನಿ ವಾಕರ್, ಸಿಕಾಡ ಹೋಟೆಲ್, ಸಂಕಮ್ ಹೋಟೆಲ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಶ್ರೀರಾಮ ಬಡಾವಣೆ, ಡಿ.ಸಿ.ಎಂ. ಟೌನ್‌ಶಿಪ್, ಶಕ್ತಿನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಹಾಗೂ ಸುತ್ತ ಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಉದ್ಯೋಗಾಸಕ್ತರಿಗೆ ಅರಿವು ಕಾರ್ಯಕ್ರಮ

ದಾವಣಗೆರೆ, ಡಿ.20- ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಬೆಂಗಳೂರು) ಇವರ ಸಹಯೋಗದಲ್ಲಿ ಸ್ವಂತ ಉದ್ಯೋಗ ಕೈಗೊಳ್ಳಲು ಆಸಕ್ತಿ ಇರುವ ಫಲಾನುಭವಿಗಳಿಗೆ ಪಿ.ಎಂ.ಇ.ಜಿ.ಪಿ. ಯೋಜನೆಯ ಕುರಿತು ನಾಡಿದ್ದು ದಿನಾಂಕ 22ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಅರಿವು ಮೂಡಿಸುವ ಕಾರ್ಯಕ್ರಮ ಆನಗೋಡಿನ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

# 23ರಂದು ನಗರದಲ್ಲಿ ಸಿದ್ಧ ಕಣ್ಣಿನ ಹನಿ ಕಾರ್ಯಕ್ರಮ



ದಾವಣಗೆರೆ, ಡಿ.20-ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮವು ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 23ರ ಗುರುವಾರ ಬೆಳಿಗ್ಗೆ 10 ರಿಂದ 11 ರವರೆಗೆ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ. ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಹೆಚ್.ಎನ್. ಸೋಮನಾಥ್ (91086-15021) ಅವರನ್ನು ಸಂಪರ್ಕಿಸಿ.

# ಒಂದೇ ಕಾಮಗಾರಿಗೆ ಮೂರು ಬಾರಿ ಅನುದಾನ ಬಿಡುಗಡೆ

**ಆರೋಪ**

ದಾವಣಗೆರೆ, ಡಿ.20- ಹೊನ್ನಾಳಿ ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಚಿಕ್ಕಹಾಲಿವಾಣ ಗ್ರಾಮದಲ್ಲಿ ಒಂದೇ ಕಾಮಗಾರಿಗೆ ಮೂರು ಬಾರಿ ಅನುದಾನ ಪಡೆಯುವ ಮೂಲಕ ಭ್ರಷ್ಟಾಚಾರ ಮಾಡಲಾಗಿದ್ದು, ಈ ಬಗ್ಗೆ. ಕೂಡಲೇ ತನಿಖೆ ನಡೆಸುವಂತೆ ಗ್ರಾಮದ ಮುಖಂಡ ಪ್ರಕಾಶ್ ಎಸ್. ಬನ್ನೇರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಚಿಕ್ಕಹಾಲಿವಾಣ ಗ್ರಾಮದ ತಳವಾರ ಈರಪ್ಪರ ಜಮೀನಿನಿಂದ ತಿಪ್ಪಾನಾಯ್ಕರ ಜಮೀನಿನವರೆಗೆ ರಸ್ತೆ ಅಭಿವೃದ್ಧಿಪಡಿಸಲು 5 ಲಕ್ಷ ರೂ. ವೆಚ್ಚದಲ್ಲಿ ದಿನಾಂಕ 28.01.2017 ಕ್ಕೆ ಪ್ರಾರಂಭಿಸಿ, 11.02-2017 ರಂದು ಮುಕ್ತಾಯ ಮಾಡಲಾಗಿದ್ದ ಕಾಮಗಾರಿಗೆ ಪುನ: ಅನುದಾನ ಪಡೆಯಲಾಗಿದೆ. ಇದೇ ಕಾಮಗಾರಿಗೆ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಅನುದಾನದಲ್ಲಿ 5 ಲಕ್ಷ ರೂ. ಗಳನ್ನು ಪಡೆಯುವ ಮೂಲಕ ವಂಚಿಸಲಾಗಿದೆ ಎಂದು ದೂರಿದರು.

ಈ ಬಗ್ಗೆ ನ್ಯಾಯ ಕೇಳಲು ಹೋದ ನಮ್ಮ ಮೇಲೆ ಗ್ರಾ.ಪಂ. ಸದಸ್ಯರಾದ ರಮೇಶನಾಯ್ಕ ಮತ್ತು ಸಂಗಡಿಗರಾದ ಕೇಶವಮೂರ್ತಿ, ಪಂಚಯ್ಯ ಅವರು ಜೀವ ಬೆದರಿಕೆ ಹಾಕಿ, ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಸ್. ಹನುಮಂತಪ್ಪ, ಹೆಚ್. ಲಕ್ಷ್ಮಪ್ಪ, ಬಿ.ಕೆ. ಬಸವರಾಜಪ್ಪ ಉಪಸ್ಥಿತರಿದ್ದರು.

# ಅನಧಿಕೃತ ಕಟ್ಟಡ ತೆರವಿಗೆ ಧರಣಿ

**ರಾಣೇಬೆನ್ನೂರು**


ರಾಣೇಬೆನ್ನೂರು, ಡಿ. 20- ನಗರದ ನಾಡಿಗ್ಗೇರ ಓಣಿಯಲ್ಲಿರುವ ಅನಧಿಕೃತ ಕಟ್ಟಡವನ್ನು ತೆರುವು ಗೊಳಿಸಿ ಸಾರ್ವಜ ನಿಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡುವಂತೆ ಒತ್ತಾಯಿಸಿ, ನಗರಸಭೆ ಎದುರು ವಕೀಲ ಸಂಜಯಕುಮಾರ ಐರಣಿ ಹಾಗೂ ಶಿವಾನಂದ ಮಂಥಗೊಂಡರ ಕುಟುಂಬದವರು ಅನಿರ್ದಿಷ್ಟ ಧರಣಿ ನಡೆಸಿದ್ದಾರೆ.

ಸಿಟಿಎಸ್ ನಂಬರ್ 2872ಎ2 ನೇ ಅದರಲ್ಲಿ ತಮ್ಮ ಕುಟುಂಬಕ್ಕೆ ಸಂಚರಿಸಲು ಅನುಬೋಗದ ಹಕ್ಕು ಇರುವ ಜಾಗದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗೊಂಡಿದ್ದು ಅದನ್ನು ತೆರವುಗೊಳಿಸುವಂತೆ ನಗರಸಭೆಗೆ 5,6 ವರ್ಷಗಳಿಂದ ಮನವಿ ಸಲ್ಲಿಸಿದ್ದರೂ ಯಾವ ಕ್ರಮ ಜರುಗಿಸಿಲ್ಲ. ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೂ ಮನವಿ ಮಾಡಿದರೂ ಸಹ ನಮಗೆ ನ್ಯಾಯ ಸಿಕ್ಕಿಲ್ಲ ಎಂದು ಪತ್ರಿಕೆಗೆ ವಕೀಲ ಸಂಜಯಕುಮಾರ ವಿವರಿಸಿದರು.





ಸ್ವರ್ಣ ಪ್ರಾಶನ
0 - 16 ವಯಸ್ಸಿನ ಮಕ್ಕಳಿಗೆ
(ಪ್ರತಿ ತಿಂಗಳ ಪುಷ್ಯ ನಕ್ಷತ್ರದ ದಿನದಂದು)
ಇದೇ ಬುಧವಾರ ಡಿಸೆಂಬರ್ 22 ರಂದು
ಸಂಜೆ 4 ರಿಂದ ರಾತ್ರಿ 10 ರವರೆಗೆ
ಮಕ್ಕಳಿಗೆ ಪ್ರತಿ ತಿಂಗಳು ಹನಿಗಳನ್ನು ಹಾಕುವುದರಿಂದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
ಅಮೇಯಾ ಹೆಲ್ತ್ ಕೇರ್ ಆಸ್ಪತ್ರೆ
ಆಯುರ್ವೇದಿಕ್ ಸರ್ಜನ್
#3425/28, 5ನೇ ಮೇನ್, ಚಿಗಟೇರಿ ಲೇಔಟ್, ಕುಂದವಾಡ ರೋಡ್, (ಚೌಡೇಶ್ವರಿ ದೇವಸ್ಥಾನದ ಹತ್ತಿರ) ದಾವಣಗೆರೆ-04
ಸಂಪರ್ಕಿಸಿ: 77604 99635, 80739 27362

ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ
Numero Astrologer & Palmistry



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ
ವಿಳಾಸ: ಪಂ. ಅರುಣ್ ಕುಮಾರ್ ಆಚಾರ್ಯ
ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ
ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ
ಮೊಬೈಲ್ : 94481 78626, 96068 18273

ಅಶ್ವಿನಿ ವಿದ್ಯಾಸಂಸ್ಥೆ
ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಪಿ.ಜಿ. ಸೆಂಟರ್
ಬಾತಿ ಕೆರೆ ಎದುರು, ಪಿ.ಬಿ. ರಸ್ತೆ ದಾವಣಗೆರೆ-577 566
2020-21ನೇ ಸಾಲಿನ ಪಿ.ಜಿ. ವಿಭಾಗದ ಫಲಿತಾಂಶ 100%



ಡಾ|| ದೀಪು M.S ಡಾ|| ಮೊನಾಲಿ M.S ಡಾ|| ಜ್ಞಾನೇಶ್ವರಿ M.S
WANTED
• Principal • Prof • Reader • Lecturer
Principal -1, Samhita siddhant -1, Shareera kriya-1, Swasta Vritta-1, Kaumar Bhritya-1, Shalyatantra-1, Kaya chikitsa-1, Shalakya Tantra-1
Principal: Ph: 94498 23088
Email: drsushruth@yahoo.com

ಸನ್‌ಶೈನ್ ಪುರಂತರ್ ಹಾಸ್ಪಿಟಲ್
SUNSHINE PURANTAR HOSPITAL
3rd Main, MCC 'A' Block, Davangere - 577 002.
REQUIREMENT
1. Ward Nurse : GNM & ANM - 15
2. OT Nurses + OT Technician - 5
3. ICU Nursing - 5
4. X-Ray Technician - 2
5. Receptionist - 2
6. Ward Boy - 5
7. Anaesthesia Technician - 2
Attractive salary Based on Eligibility & Experience
Apply with : Biodata, Recent Colour Photo, Address Proof , Degree Certificate.
ಉಚಿತ ವಸತಿ ಸೌಲಭ್ಯವಿರುತ್ತದೆ.
SUNSHINE PURANTAR HOSPITAL
CONTACT : 78378 63786, 88846 34545

# ಅತಿಥಿ ಉಪನ್ಯಾಸಕರಿಗಾಗಿ ಧ್ವನಿ ಎತ್ತಿದ ವಿದ್ಯಾರ್ಥಿಗಳು



## ನಗರದಲ್ಲಿ ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ

ದಾವಣಗೆರೆ, ಡಿ.20- ರಾಜ್ಯದ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ನೇತೃತ್ವದಲ್ಲಿ ನಗರದಲ್ಲಿ ಇಂದು ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಿಂದ ಉಪವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಲೇಜುಗಳ ವಿದ್ಯಾರ್ಥಿಗಳು, ಎಐಡಿಎಸ್‌ಓ ಪದಾಧಿಕಾರಿಗಳು, ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸುವಂತೆ ಉಪವಿಭಾಗಾಧಿಕಾರಿ ಮುಖಾಂತರ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಸರ್ಕಾರ ಇನ್ನೂ ಖಾಯಂಗೊಳಿಸಿಲ್ಲ. ಅಲ್ಲದೆ, ಸಕಾಲದಲ್ಲಿ ನಿಗದಿತ ಗೌರವಧನ ನೀಡುತ್ತಿಲ್ಲ. ಹೀಗಾಗಿ, ಅತಿಥಿ ಉಪನ್ಯಾಸಕರು ಜೀವನ ನಡೆಸುವುದೇ ಕಷ್ಟಕರವಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ತರಗತಿಗಳಲ್ಲಿ ಅತಿಥಿ ಉಪನ್ಯಾಸಕರು ಅತ್ಯಂತ ಶ್ರದ್ಧೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಗೆ ಶ್ರಮಿಸುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ರೂಪಿಸಿಕೊಡುತ್ತಿದ್ದಾರೆ. ಆದರೆ, ಸರ್ಕಾರದ ನೀತಿಗಳಿಂದಾಗಿ ಅತಿಥಿ ಉಪನ್ಯಾಸಕರಿಗೆ ಗೌರವಯುತ ಬದುಕು ಮರಿಚೀಕೆಯಾಗಿದೆ ಎಂದು ಆಕ್ಷೇಪಿಸಿದರು.

ತಕ್ಷಣವೇ ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಬಗೆಹರಿಸಬೇಕು. ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಕಾಲೇಜುಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಬೇಕು. ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನಾನಿರತ ವಿದ್ಯಾರ್ಥಿಗಳು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ, ಕಿರಣ್, ಪುಷ್ಪಾ, ಕಾವ್ಯ, ಶಿವಕುಮಾರ್ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ವಿಜೃಂಭಣೆಯ ದಾನಮ್ಮ ದೇವಿ ಕಾರ್ತಿಕ

ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಸೋಮವಾರ ಸಂಜೆ ಆಯೋಜನೆಗೊಂಡಿದ್ದ ಕಡೇ ಕಾರ್ತಿಕೋತ್ಸವವು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

## ಇಂದಿನ ಆಕಾಶವಾಣಿ ಕೃಷಿ ರಂಗದಲ್ಲಿ ಸಾವಯುವ ಕೃಷಿಕ ಕೆ.ಜಿ. ಈಶ್ವರಪ್ಪ



ಆಕಾಶವಾಣಿಯಲ್ಲಿ ಇಂದು ಸಂಜೆ 6.50ಕ್ಕೆ ಪ್ರಸಾರವಾಗುವ ಕೃಷಿ ರಂಗ ಕಾರ್ಯಕ್ರಮದಲ್ಲಿ ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದ ಸಾವಯವ ಕೃಷಿಕ ಕೆ.ಜಿ. ಈಶ್ವರಪ್ಪ ಭಾಗವಹಿಸಿ ಮಾತನಾಡಲಿದ್ದಾರೆ. ಸದಾ ಸಂಶೋಧನೆಯ ತುಡಿತ ಹೊಂದಿರುವ, ಸಾವಯವ ಕೃಷಿ ಕ್ಷೇತ್ರದಲ್ಲಿ ಪರಿಣಿತರಾದ ಈಶ್ವರಪ್ಪ ಅವರು, ಕಂದಗಲ್ಲು ಗ್ರಾಮದಲ್ಲಿ ಪಂಚವಟಿ ನಿರ್ಮಿಸಿ ಗಮನ ಸೆಳೆದಿದ್ದಾರೆ. ಅಲ್ಲದೇ, ಸುಮಾರು 20 ವರ್ಷಗಳಿಂದ ಮನೆಯಲ್ಲಿ ಅಗ್ನಿಹೋತ್ರವನ್ನೂ ಮಾಡುತ್ತಿದ್ದಾರೆ.

## ಹೆಣ್ಣು ಮಗು ಎಂದು ಕೊಂದ ತಂದೆಗೆ ಥಳಿತ: ರಸ್ತೆಯಲ್ಲಿ ಮೆರವಣಿಗೆ ಮಾಡಿದ ಜನರು

ದಾವಣಗೆರೆ, ಡಿ.20- ಹೆಣ್ಣು ಮಗು ಜನಿಸಿದೆ ಎಂದು ಮಗುವನ್ನು ಎತ್ತಿಕೊಂಡು ಮೇಲಿಂದ ನೆಲಕ್ಕೆ ಬಿಟ್ಟು ಕೊಂದು ಹಾಕಿದ್ದ ತಂದೆಗೆ ಜನರು ಮನಬಂದಂತೆ ಥಳಿಸಿ ಮೆರವಣಿಗೆ ಮಾಡಿರುವ ಘಟನೆ ನಗರದ ಅಖ್ತರ್ ರಜಾಕ್ ವೃತ್ತದ ಬಳಿ ನಡೆದಿದೆ. ಈ ಘಟನೆ ಮೂರು ತಿಂಗಳ ನಂತರ ತಡವಾಗಿ ಬೆಳಕಿಗೆ ಬಂದಿದೆ.

ಮನ್ಸೂರ್ ಮಗುವಿನ ಪ್ರಾಣ ತೆಗೆದ ತಂದೆ. ಈತ ಮಿಲ್ಲತ್ ಕಾಲೋನಿಯ ನಿವಾಸಿಯಾಗಿದ್ದು, ಮಗಳನ್ನು ಸಾಯಿಸಿದ್ದಾನೆ ಎಂಬ ಕಾರಣಕ್ಕೆ ಸ್ಥಳೀಯರು, ಕಳೆದ ದಿನ ಆರೋಪಿ ಮನ್ಸೂರ್ ಹಾಗು ಆತನ ತಮ್ಮ ಮೈನುದ್ದೀನ್‌ನನ್ನು ಹಿಗ್ಗಾಮುಗ್ಗ ಥಳಿಸಿ ಬೀದಿಯಲ್ಲಿ ಮೆರವಣಿಗೆ ಮಾಡಿದ್ದಾರೆ.

ಈ ಹಿಂದೆ ಮಸೀದಿ ಜಮಾಯತ್‌ನಿಂದ ಪಂಚಾಯಿತಿ ಮಾಡಲು ಸಭೆ ಕರೆಯಲಾಗಿತ್ತು. ಸಭೆಗೆ ಆರೋಪಿ ಬಾರದ ಹಿನ್ನೆಲೆ ಜನರು ಮನ್ಸೂರ್ ಹಾಗೂ ಆತನ ತಮ್ಮ ಮೈನುದ್ದೀನ್ ಅನ್ನು ಹಿಡಿದು ಜಮಾಯತ್ ಬಳಿ ಕರೆ ತಂದಿದ್ದಾರೆ.

ಆರೋಪಿ ಮನ್ಸೂರ್ ಸಹೋದರನಾಗಿರುವ ಕಾಂಗ್ರೆಸ್ ಮುಖಂಡ ಮೈನುದ್ದೀನ್ ಇದರಲ್ಲಿ ಭಾಗಿಯಾಗಿದ್ದಾನೆಂಬ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆ ಮೈನುದ್ದೀನ್ ಆತನ ಅಣ್ಣ ಮನ್ಸೂರ್ ಇಬ್ಬರನ್ನು ಸಾರ್ವಜನಿಕರು ಥಳಿಸಿದ್ದಾರೆ.


ಮೂರು ತಿಂಗಳ ಹಿಂದೆ ಹಲ್ಲೆ ಮಾಡಿದ್ದ ವೇಳೆ ಅಸ್ವಸ್ಥಗೊಂಡ ಮಗುವನ್ನು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಈ ವೇಳೆ ಸಹ ಆತ ಆಸ್ಪತ್ರೆಗೆ ಭೇಟಿ ನೀಡಿರಲಿಲ್ಲ. ಇದರಿಂದ ಆಕ್ರೋಶಗೊಂಡ ಜನ ಆರೋಪಿಗಳನ್ನು ಮೆರವಣಿಗೆ ಮಾಡಿಸಿದ್ದಾರೆ. ಘಟನೆ ಕುರಿತು ಮೂರು ತಿಂಗಳ ಬಳಿಕ ಸತ್ಯ ಹೊರ ಬಂದಿದ್ದು, ಹಲ್ಲೆ ಮಾಡಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

## ಹಳೇಬಾತಿಯಲ್ಲಿ ಮಂಗಗಳ ಹಾವಳಿ ಕ್ರಮ ಕೈಗೊಳ್ಳಲು ಆಗ್ರಹ



ದಾವಣಗೆರೆ, ಡಿ.20- ಇಲ್ಲಿಗೆ ಸಮೀಪದ ಹಳೇಬಾತಿ ಗ್ರಾಮದಲ್ಲಿ ಮಂಗ ಹಾಗೂ ಮುಷ್ಯಗಳ ಹಾವಳಿ ಹೆಚ್ಚಾಗಿದ್ದು, ಜನರ ಮೇಲೆ ದಾಳಿ ಮಾಡಿ ಗಾಯ ಗೊಳಿಸುತ್ತಿವೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಈ ಬಗ್ಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಹಾಗೂ ಸದಸ್ಯರು ಅರಣ್ಯ ಇಲಾಖೆಗೆ ಖುದ್ದಾಗಿ ಮೂರು ಬಾರಿ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿರುವ ಗ್ರಾಮಸ್ಥರು, ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಮಹಾರಾಜ ಪೇಟೆ ವಿಠ್ಠಲ ಮಂದಿರದಲ್ಲಿ ನಾಳೆ ಕಾರ್ತಿಕೋತ್ಸವ



ದಾವಣಗೆರೆ, ಡಿ.20 - ನಗರದ ಮಹಾರಾಜ ಪೇಟೆಯಲ್ಲಿರುವ ಶ್ರೀ ವಿಠ್ಠಲ ರುಖುಮಾಯಿ ದೇವರ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 22 ರ ಬುಧವಾರ ನಡೆಯಲಿದೆ. ಅಂದು ಬೆಳಿಗ್ಗೆ 5 ಗಂಟೆಗೆ ದೇವರ ಅಭಿಷೇಕ, ಕಾಕಡಾರತಿ, ಭಜನೆ, ಶ್ರೀ ಜ್ಞಾನೇಶ್ವರಿ (ಭಗವದ್ಗೀತೆ) ಸಾಮೂಹಿಕ ಪಾರಾಯಣ, ಹರಿಪಾಠ, ಮಹಾ ಮಂಗಳಾರತಿ. ಈ ಬಾರಿ ವಿಶೇಷವಾಗಿ ಶ್ರೀ ವಿಠ್ಠಲ ರುಖುಮಾಯಿ ದೇವರಿಗೆ ಬೆಣ್ಣೆ ಅಲಂಕಾರ ಮಾಡಲಾಗುವುದು. ಸಂಜೆ 6.30 ರಿಂದ ಭಜನೆ ರಾತ್ರಿ 7.30 ಕ್ಕೆ ಕಾರ್ತಿಕ ದೀಪ ಹಚ್ಚಲಾಗುವುದು ಎಂದು ದೇವಸ್ಥಾನ ಮಂಡಳಿ ತಿಳಿಸಿದೆ.

## ಹಳೇಬಾತಿ ಉರುಸ್ ಜಾತ್ರೆ ರದ್ದು

ದಾವಣಗೆರೆ,ಡಿ.20- ನಾಡಿದ್ದು ದಿನಾಂಕ 22ರಿಂದ 24ರವರೆಗೆ ನಡೆಯಬೇಕಾಗಿದ್ದ ತಾಲ್ಲೂಕಿನ ಹಳೇಬಾತಿ ಶ್ರೀ ಚಮನ್ ಸ್ವಾಮಿ ಮಠ ಮತ್ತು ದರ್ಗಾದ ಉರುಸ್ (ಸಂದಲ್) ಜಾತ್ರೆಯನ್ನು ರದ್ದುಪಡಿಸಲಾಗಿದೆ. ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು ಮತ್ತು ಮಠ ಮತ್ತು ದರ್ಗಾ ಸಮಿತಿಯವರು ಸೇರಿ, ಉರುಸ್ ಕಾರ್ಯಕ್ರಮವನ್ನು ರದ್ದುಗೊಳಿಸಿರುವುದಾಗಿ ಸಮಿತಿ ಅಧ್ಯಕ್ಷ ಡಿ.ಹೆಚ್. ವೆಂಕಟೇಶ ತಿಳಿಸಿದ್ದಾರೆ.

## ಆವರಗೊಳ್ಳದಲ್ಲಿ ಇಂದು ಕಾರ್ತಿಕ

ಶ್ರೀ ವೀರಭದ್ರೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಇಂದು ಸಂಜೆ ಜರುಗಲಿದೆ. ಶ್ರೀ ವೀರಭದ್ರೇಶ್ವರ ಸ್ವಾಮಿ, ಆದಿ ದೈವ ಕನ್ಯೇಶ್ವರ ಸ್ವಾಮಿ, ಜಗದ್ಗುರು ರೇಣುಕಾ ಚಾರ್ಯ ಸ್ವಾಮಿಗಳಿಗೆ ರುದ್ರಾಭಿಷೇಕ ನಡೆಯಲಿದೆ. ನಂತರ ದೊಡ್ಡಬಾತಿಯ ಶ್ರೀ ರೇವಣ ಸಿದ್ದೇಶ್ವರ, ಶ್ರೀ ಬೀರಲಿಂಗೇಶ್ವರ ದೇವರು ಗಳನ್ನು ಬರಮಾಡಿ ಕೊಡಲಾಗುವುದು ಎಂದು ಸೇವಾ ಸಂಘದ ಅಧ್ಯಕ್ಷ ಬಿ. ಎಂ. ಷಣ್ಮುಖಯ್ಯ ತಿಳಿಸಿದ್ದಾರೆ.


## 6ನೇ ವರ್ಷದ ಪುಣ್ಯಸ್ಮರಣೆ



**ಕಾಕನೂರು ಎಂ.ಬಿ. ಶಂಕರಮೂರ್ತಿ, ಶಿಕ್ಷಕರು**

*ಕಾಯವಳಿದರೂ ಕಾಯಕಯೋಗಿಗೆ ಸಾವಿಲ್ಲ*
*ಎಂಬುದನ್ನು ನಡೆಯಿಂದ ತೋರಿ ನಮ್ಮ ಚೈತನ್ಯದಂತೆ ನಮ್ಮೊಂದಿಗೆ*
*ಸದಾ ಬೆಳಗಿ ಬಾಳುತ್ತಿರುವ ನೀವೆಂದೂ ನಮ್ಮೊಳಗೆ ಜೀವಂತ ಚೈತ್ರ*

ಸದಾ ನಿಮ್ಮ ನೆನಪು ಮತ್ತು ಆಶೀರ್ವಾದಗಳಲ್ಲಿ ಬಾಳುತ್ತಿರುವ ನಿಮ್ಮ ಪತ್ನಿ ಮತ್ತು ಮಕ್ಕಳು

ಎ. ಸಿ. ಶಶಿಕಲಾ ಶಂಕರಮೂರ್ತಿ,
ಅನುಷಾ ಎಸ್., ಸೌಹಾರ್ದ ಎಸ್. ಹಾಗೂ ನಿಮ್ಮೆಲ್ಲಾ ವಿದ್ಯಾರ್ಥಿಗಳು





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte